"SATYAVADI" ॥ ಶ್ರೀ ॥ Regd No M 1299

ಸತ್ಯವಾದಿ

ಅರಮನೆ ಸಿರಸ್ತೇದಾರ್ ಎಂ. ಏ. ಸುಬ್ಬರಾಯರಿಂದ ಪ್ರತಿಷ್ಠಿತಪಾದದು

Proprietors—The Satyavadi Limited, Mysore

(Founded 1917

ವಾರ್ಷಿಕ ಚಂದಾ ಸ್ಥಳಕ್ಕೆ ರೂ. 1—0—0

ಪರಸ್ಥಳಕ್ಕೆ ಅಂಚೆ ವೆಚ್ಚ ಸೇರಿ 1—10—0

ಸಂಪುಟ 25 ಸಂಚಿಕೆ 3] ಬುಧವಾರ 18-9-1940 [ಬಿಡಿಪ್ರತಿ 6 ಕಾಸು

ಪಟ್ಟಾಭಿಷೇಕ ಸಮಾರಂಭದಲ್ಲಿ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್‌ರವರು ತಮ್ಮ ಪ್ರಜಾಸಮುದಾಯಕ್ಕೆ ಮುಂದೆ ಕಂಡ ಸಂದೇಶವನ್ನು ದಯಪಾಲಿಸಿದ್ದಾರೆ.

ನನ್ನ ಪ್ರೀತಿಪಾತ್ರರಾದ ಪ್ರಜೆಗಳೇ,

ಪೂಜ್ಯರಾದ ನಮ್ಮ ದೊಡ್ಡಪ್ಪನವರು ಕೀರ್ತಿಶೇಷರಾದ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರವರಲ್ಲಿ ಗೌರವವನ್ನೂ ಪ್ರೇಮವನ್ನೂ ತೋರಿ, ಶ್ರೀಮಂತರಿಂದಲೂ ಬಡವರಿಂದಲೂ, ಉನ್ನತ ಸ್ಥಾನದವರಿಂದಲೂ, ಸಾಮಾನ್ಯರಿದಲೂ, ಸಂಸ್ಥಾನದ ಎಲ್ಲಾ ಕಡೆಗಳಿಂದ ಬಂದು ಸುರಿದ ಅಸಂಖ್ಯಾತ ನಿದರ್ಶನಗಳಿಂದ ನನ್ನ ಹೃದಯ ಗಾಢವಾಗಿ ತಟ್ಟಿಹೋಗಿದೆ. ಅವರುಗಳೂ ನಾನೂ ಪಟ್ಟಿರುವ ನಷ್ಟ ಎಂತಹುದೆಂದು ಅವು ಸಾಕ್ಷವೊದಗಿಸಿ ನನಗೂ, ನನ್ನ ಮನೆತನದ ಕುಟುಂಬ ವರ್ಗಕ್ಕೂ ಬಹಳವಾಗಿ ಮನಸ್ಸಮಾಧಾನವನ್ನು ತಂದಿವೆ; ಮತ್ತು, ನಾನು ವಹಿಸಿಕೊಳ್ಳತ್ತಿರುವ ಮಹತ್ಕಾರ್ಯದಲ್ಲಿ ನನಗೆ ಧೈರ್ಯವನ್ನು ಕೊಡುವ ಬೆಂಬಲದ ಆಧಾರವಾಗಿದೆ.

ಮೈಸೂರು ಸಿಂಹಾಸನಕ್ಕೆ ಅನುಕ್ರಮವಾಗಿ ನಾನು ಬರುವುದರಲ್ಲಿ ಮಹಾನುಭಾವರಾದ ರಾಜಶ್ರೇಷ್ಠರನ್ನು ಹಿಂಬಾಲಿಸುತ್ತಿದ್ದೇನೆ. ಅವರು ನಿಮ್ಮೆಲ್ಲರಲ್ಲೂ ಪ್ರೇಮವಿಟ್ಟಿದ್ದರು ತಮ್ಮ ದೈವಭಕ್ತಿಯಿಂದ ತಮ್ಮ ಸುಜ್ಞಾನದಿಂದ ತಮ್ಮ ಕೃಪಾಸ್ನತೆಯಿಂದ ತಮ್ಮ ವಿನಯದಿಂದ ತಮ್ಮ ಕರ್ತವ್ಯ ನಿಷ್ಠತೆಯಿಂದ ತಮ್ಮ ರಾಜಗಾಂಭೀರ್ಯದಿಂದ ರಾಜ್ಯಭಾರಮಹಿಮೆಯಿಂದ ನಿಮ್ಮೆಲ್ಲರ ಪ್ರೇಮವನ್ನು ಆಕರ್ಷಿಸುತ್ತಿದ್ದರು.

ಅವರ ನೆನಪು ಎಂದೆಂದಿಗೂ ನಮ್ಮಲ್ಲಿ ನಿಲ್ಲುವುದು ಈಗ ಅದು ಅವರ ನಷ್ಟದ ಪೂರ್ಣ ಘಾತವನ್ನು ನಮ್ಮ ಬಾಳಿನಲ್ಲಿ ಅವರು ಬಿಟ್ಟ ದೊಡ್ಡ ಕೊರತೆಯನ್ನು ಅನುಭವಿಸುತ್ತಿರುವ ನಮಗೆ ದುಸ್ಸಹವಾಗಿರುವದು. ವರ್ಷಗಳು ಕಳೆದಂತೆಲ್ಲಾ ಅವರು ನಮಗೆ ಏನಾಗಿದ್ದರು, ಆ ಅರ್ಥವನ್ನೆಲ್ಲಾ ಬೆಲೆಗಂಡು ತಿಳಿದಂತೆಲ್ಲಾ ಅವರ ಬಾಳಿನಿಂದ ನಮ್ಮ ಬಾಳನ್ನು ನಾವು ತಿದ್ದುವುದನ್ನು ಕಲಿತಂತೆಲ್ಲಾ ಆ ನೆನಪು ನಮಗೆ ಸವಿಯಾದ ನೆನಪಾಗಿ ಬೆಳೆಯುವುದು.

ಈಗ ನಾವು ಅವರ ಮಹತ್ಪ್ರಯತ್ನವನ್ನು ಈಡೇರಿಸುವುದಕ್ಕಾಗಿ ನಮ್ಮನ್ನು ಅರ್ಪಣಮಾಡಿಕೊಳ್ಳಬೇಕಾಗಿದೆ. ಒಂದು ದೊಡ್ಡ ಕುಟುಂಬದ ಭಾವನೆಯಲ್ಲಿ ನಮ್ಮನ್ನು ಮುಡಿಪುಕಟ್ಟಿಕೊಳ್ಳುವುದಾದರೆ, ನಾವು ಅದನ್ನು ಈಡೇರಿಸುವುದರಲ್ಲಿ ಕೃತಾರ್ಥರಾಗಬಲ್ಲೆವು. ಈ ಕಾಲದಲ್ಲಿ ಲೋಕ ಎಡರು ತೊಡರುಗಳಿಂದ ತುಂಬಿಹೋಗಿದೆ; ಈ ಕಷ್ಟಗಳನ್ನು ಒಕ್ಕಟ್ಟಿನಿಂದಲೂ, ಸ್ವಾರ್ಥತ್ಯಾಗದಿಂದಲೂ ಎದುರಿಸಿದರೆ ಮಾತ್ರ ನಾವು ಗೆದ್ದುಕೊಂಡು ಈಚೆಗೆ ಬರಬಹುದು. ಈ ಭಾವನೆಯಲ್ಲಿ ನಾನು ನನ್ನ ಹಿರಿಯರ ಸಿಂಹಾಸನವನ್ನೇರುವ ಈ ವ್ರತಸಮಾರಂಭದಲ್ಲಿ ನನ್ನನ್ನೂ, ನನ್ನ ಜೀವಮಾನವನ್ನೂ ನನ್ನ ಸಕಲರ ಸರ್ವಸ್ವವನ್ನೂ ಮೈಸೂರು ಸಂಸ್ಥಾನದ ಜನರ ಸೇವೆಗಾಗಿ ಸಮರ್ಪಣ ದೀಕ್ಷೆ ಯೆಂಬುದಾಗಿ ಎಣಿಸುತ್ತೇನೆ. ಇದರಲ್ಲಿ ನನ್ನೊಬ್ಬನ ಪ್ರಯತ್ನವೊಂದೇ ಜಯಶಾಲಿಯಾಗಲಾರದೆಂದು ನಾನು ಚೆನ್ನಾಗಿ ಅರಿತಿದ್ದೇನೆ. ನಿಮ್ಮ ನೆರವು, ನಿಮ್ಮ ಸಹಕಾರ, ನಿಮ್ಮ ನಂಬಿಕೆ, ನಿಮ್ಮ ಪ್ರೇಮ ನನಗೆ ಬೇಕು.

ನಮ್ಮ ವಶಕ್ಕೆ ಒಪ್ಪಿಸಿರುವ ಪವಿತ್ರ ಕರ್ತವ್ಯದ ನಿರ್ವಹಣೆಯಲ್ಲಿ ಬಿಳಿಕನ್ನೂ ಶಕ್ತಿಯನ್ನು ಭಗವಂತನು ನನಗೆ ಅನುಗ್ರಹಿಸಲಿ; ಮತ್ತು ಆತನ ವರಪ್ರಸಾಗಳು ಯಥೇಷ್ಟವಾಗಿ ಮೈಸೂರು ಸಂಸ್ಥಾನದ ಪ್ರತಿಯೊಂದು ಮನೆಯಲ್ಲಿಯೂ ತೊಟ್ಟಿಯಲ್ಲಿಯೂ ಹೊಕ್ಕು ನೆಲಸಿ ಹೊಳೆದು ಬೆಳಗಲಿ.

ಶ್ರೀ ಜಯ ಚಾಮರಾಜ ಒಡೆಯರ್.

MYSORE'S NEW RULER

The dawn of tomorrow will herald an era of happiness through-out the length and breadth of the State of Mysore. Hundreds of thousands of Mysoreans will celebrate the august occasion of Sri Jayachamaraja's Pattabhisekam tomorrow. In common with thousands of our countrymen we offer our sincere felicitations to His Highness Sri Jaya Chamaraja Wadiyar Bahadur on this auspicious occasion and pray God to bless His Highness with long life, health and happiness.

His Highness is young, but his deep learning and wide travel will help him to shoulder the heavy burden of keeping aloft the great traditions of his ancient family. And in this he has the loyal, sincere and efficient services of his eminent Dewan. We hope the people of Mysore will be second to none in offering them their loyal and dutiful cooperation. We pray God that His Highness' reign may bring love, goodwill, peace and plenty to the people of Mysore.

(Modern Times)

ಸತ್ಯವಾದಿ ವಾರಪತ್ರಿಕೆಗೆ ಚಂದಾದಾರರಾಗಿರಿ

ಈ ವಾರದ ಕಥೆ—

ಇಪ್ಪತ್ತೆದು ಸವರನ್ನುಗಳು

(ಲೇಖಕರು—ಕೃಷ್ಣಸ್ವಾಮಯ್ಯಂಗಾರ್, ಮೈಸೂರು.)

(4—9—40 ನೆಯ ಸಂಚಿಕೆಯಿಂದ ಮುಂದುವರಿದುದು)

ನಾನು "ನನ್ನ ಜೀವಿತೇಶ್ವರಿ, ನಿನ್ನೆ ನೀನು ಹೋದಲಾಗಾಯಿತು ನನ್ನ ಜೀವನವನ್ನು ನಿನ್ನ ಜತೆಯಲ್ಲಿ ತೆಗೆದುಕೊಂಡು ಹೋದಂತೆ ಕಾಣುತ್ತೆ. ಈ ನನ್ನ ಶರೀರ ಮಾತ್ರ ಇಲ್ಲಿ ಬಿದ್ದಿರುವುದು. ಒದ್ದಿ ಮಂಕಾಗಿ ನನ್ನನ್ನು ನಾನೇ ಮೈಮರೆತಿರುವೆನು." ಎಂದೆನು.

ಅವಳು—"ನಾನು ಭಾಷೆಗೆ ಎಂದಾದರೂ ತಪ್ಪುವೆನೇ? ಪ್ರಿಯ ನೀವು ಹೀಗೆ ಹತಾಶರಾದರೆ ಹೇಗೆ? ನಾನು ಬೆಳಗಿನ ಕಾಲದಲ್ಲೂ ನಿಮ್ಮ ಜತೆಯಲ್ಲಿದ್ದರೆ ನಮ್ಮವರೇನೆಂದುಕೊಳ್ಳುವರು. ನೀವು ಹೀಗಾಡಬೇಡಿ" ಎಂದಳು.

ನಾನು—ಪ್ರಿಯತಮೆ, ಇದೋ ದಯವಿಟ್ಟು ಈ ಫಲಹಾರವನ್ನು ಸ್ವೀಕರಿಸಿ, ಸ್ವಲ್ಪ ಬಾದಾಮಿಹಾಲು ತೆಗೆದುಕೋ. ನಿನಗಾಗಿ ಪ್ರೀತಿಯಿಂದ ಅವುಗಳನ್ನು ತಂದಿಟ್ಟಿರುವೆನು." ಎಂದು ಎರಡು ಸೇಬಿನ ಹಣ್ಣನ್ನು ಅವಳ ಕೈಲಿಟ್ಟೆನು.

ನನ್ನಿಂದ ತೆಗೆದುಕೊಂಡ ಹಣ್ಣನ್ನು ಅಲ್ಲೇ ವೀಜಿನ ಮೇಲೆ ಇಟ್ಟು "ಪ್ರಿಯಾ? ಈ ಉತ್ಕೃಷ್ಟಭೋಜ್ಯವಸ್ತುಗಳನ್ನು ನನಗಾಗಿ ತರಿಸಿರುವುದು ನನಗೆ ಗೊತ್ತು. ಬನ್ನಿ ಇಬ್ಬರೂ ಸ್ವಲ್ಪ ರುಚಿ ನೋಡುವ ಎನ್ನುತ್ತಾ ಒಂದೊಂದನ್ನು ತಾನು ರುಚಿನೋಡುತ್ತಾ, ನನಗೆ ಕೊಡುತ್ತಿದ್ದಳು. ನಾನು ಅವಳು ಕೊಟ್ಟದ್ದನ್ನೆಲ್ಲಾ ಬದಲು ಮಾತನಾಡದೆ ತಿಂದೆನು. ಬಾದಾಮಿ ಪೀರು ಸಹ ಮುಗಿಸಿದೆವು. ಅಲ್ಲಿದ್ದ ವೀಳೆಯವೆಲೆಗೆ ಸುಣ್ಣ ಹಾಕಿ ನಾರು ತೆಗೆದು ಮಡಿಸಿ ನನಗೆ ಕೊಟ್ಟಳು. ಮಲ್ಲಿಕಾವುಷ್ಪವನ್ನು ಮುಡಿದುಕೊಂಡು ಹಾಸಿಗೆ ಬಳಿ ಬಂದು ಹಾಯಾಗಿ ಕುಳಿತು ತಾಂಬೂಲವನ್ನು ಅಗಿಯುತ್ತಾ ಹಾಗೇ ಪವಡಿಸಿದಳು.

ಅಂತು ಇದೇ ರೀತಿ ಹತ್ತು-ಹನ್ನೆರಡು ದಿನಗಳು ಕಳೆಯಿತು. ನಾನೂ ಅಮರಲೋಕದ ದೃಶ್ಯವನ್ನು ಅಮರಾಂಗನೆಯಂತಿರುವ ನನ್ನ ನೂತನ ಗೆಳತಿಯೊಂದಿಗೆ ಕಳೆದೆನು. ಈ ಮಧ್ಯ ವಿಶೇಷವೇನೂ ನಡೆಯದಿದ್ದರೂ ನನ್ನ ಮುಂಭಾಗದ ಮನೆಯವರು "ಇದೇನು? ಇವನು ತಿರಾ ಕಂಗೆಟ್ಟಿರುವನು" ಎನ್ನುತ್ತಾ ನನ್ನ ರೂಮಿನೊಳಕ್ಕೆ ಬಂದು "ಏನೆಯ್ಯಾ ಮೈ ಹುಷಾರಿಲ್ಲವೆಂದು ಕಾಣುತ್ತೆ. ಬಹು ಇಳಿದುಹೋಗಿರುತ್ತೆ" ಎಂದರು. ನಾನು ಗಮನಿಸಲಿಲ್ಲಾ. ಆ ದಿನ ಮಧ್ಯಾಹ್ನ ನನ್ನ ಸಮೀಪ ಬಂಧುವೊಬ್ಬನು ಬೊಂಬಾಯಿನಿಂದ ಬಂದಿಳಿದನು. ಅಲ್ಲಿ ಅವನು ಡಾಕ್ಟರ್ ಪರೀಕ್ಷೆ ಒದುತ್ತಿದ್ದನು. ಬಂದವನೇ "ಏನೆಯ್ಯಾ ಕ್ಯಾಸಂಪ್ಟೀವ್ ಆಗಿ ಕಾಣುತ್ತಿಯಾ? ಒಳ್ಳೆ ಔಷಧ ಟಾನಿಕ್ ತೆಗೆದುಕೋ" ಎಂದನು.

ಅವನು ನನ್ನನ್ನು ನೋಡುವ ಉದ್ದೇಶದಿಂದ ಬಂದಿದ್ದರೂ ಬೇರೆ ಕಡೆ ಇಳಿದಿದ್ದನು. ಆದರೆ ಸದಾ ನನ್ನ ಜತೆಯಲ್ಲೇ ಇರುತ್ತಿದ್ದನು. ಅವನು ಬಂದ ದಿನ ಸಾಯಂಕಾಲ ನಾವು ಅಲ್ಲಿ ಇಲ್ಲಿ ತಿರುಗಿ ಫಲಹಾರ ಮುಗಿಸಿ ರಾತ್ರಿ ಎಂಟಕ್ಕೆ ರೂಮಿಗೆ ಬಂದೆವು. ಅವನು—ಲೋ ಪಗಡೆ ತೆಗೆಯೋ ನಿನ್ನ ಜತೆಯಲ್ಲಿ ಆಡಿ 4-5 ವರುಷ ಆಯಿತು. ಎಂದು ಆಗ್ರಹಮಾಡಿದನು.

ನಾನು ಯೋಚಿಸಿದೆನು ಒಂಭತ್ತಕ್ಕೆ ಸರಿಯಾಗಿ ನನ್ನ ಮನೋನಾಯಕಿಯು ಬರುವಳು. ಇವನು ಆತಬೇಕೆನ್ನುವನು, ಘಂಟೆ ಎಂಟಾಗಿದೆ ಎಂದು, ಒಂದು ಆಟ ತಾನೇ ಮಹಾ, ಎಷ್ಟೇ ಹೆಚ್ಚೆಂದರೂ ಅರ್ಧ ಘಂಟೆಯು ಮೇಲಾಗಲಾರದು ಎಂದುಕೊಂಡು ಈ ದಿನ ಒಂದೇ ಒಂದು ಆಟ ಸಾಕು, ನಾಳೆ ಬೆಳಿಗ್ಯೆ ಬಾ, ಸಾಯಂಕಾಲದ ವರೆಗೆ ನೂರು ಆಟಗಳನ್ನು ಬೇಕಾದರೂ ಆಡೋಣ ಎನ್ನುತ್ತಾ ಹಾಸ್ಸನ್ನು ಹಾಕಿದೆನು.

ಆಟಕ್ಕೆ ಸುರುವಾಯಿತು. ಮುಕ್ಕಾಲು ಘಂಟೆ ಆದರೂ ಆಟ ಮುಗಿಯಲಿಲ್ಲ. ನನ್ನ ಕಾಯಿಗಳು ಎಂಟು ಹಾಸಿಗೆ ಹೋಗುವಲ್ಲಿ ಸಾಯುತ್ತಿದ್ದವು. ಮನಸ್ಸೆಲ್ಲಾ ಎಲ್ಲಿ ಒಂಭತ್ತಕ್ಕೆ ಮೊದಲು ಆಟವು ಮುಗಿಯುವುದಿಲ್ಲವೋ ಮುಂದೇನಾಗುತ್ತೋ ಎಂಬ ಭೀತಿಗೆ ಆಟದ ಗಮನ ಹೋಯಿತು. ಏಳು ಕಾಯಿಗಳು ಹಣ್ಣಾಗಿತ್ತು ಒಂದು ಮಾತ್ರವಿತ್ತು. ನನ್ನ ಗೆಳೆಯನಿಗೆ ಆಟದಲ್ಲಿ ಉತ್ಸಾಹ ಒಹಳ ವಿತ್ತು. ಅವನದು ಮೂರು ಕಾಯಿಗಳಿದ್ದವು. ಅಂತು ಒಂಭತ್ತಕ್ಕೆ ಮೂರು ನಿಮಿಷಗಳು ಮಾತ್ರ ಉಳಿದಿವೆ. ನನಗ ಆಕಾಶವೇ ತಲೆಯು ಮೇಲೆ ಬಿದ್ದಂತಾಯಿತು.

ಮನದಲ್ಲಿ ನಾಟಿದ್ದ ಗಾಬರಿಯಂತೆ 9 ಕ್ಕೆ ಸರಿಯಾಗಿ ವಿದ್ಯುದ್ದೀಪವು ಆರಿತು. ನನ್ನ ಜೀವವೂ ಅದರ ಜತೆಯಲ್ಲಿ ಆರಿದಂತೆ ನೊಂದುಂತಾಯಿತು. ಪುನಃ ದೀಪವು ಹತ್ತಿತು. ನನ್ನ ಮನೋರಾಣಿಯು ನನ್ನ ಪಕ್ಕದಲ್ಲಿ ಎಂದಿನಂತೆ ಗಂಭೀರ ಮುದ್ರೆಯಿಂದಾ ಕುಳಿತಿದ್ದಳು.

ದಾಳವು ಉರುಳುತ್ತಿವೆ, ಕಾಯಿಗಳನ್ನು ನಡೆಸುತ್ತಿದೇವೆ. ಹಾಗೆ ಯೋಚಿಸಿದೆನು. ಶರೀರದ ನಾಭಿಕಮಲದಲ್ಲಿ ಭಳಿಯು ಉತ್ಪನ್ನವಾಗಿ ಶರೀರದ ರಕ್ತವಾಹಿನಿಗಳೆಲ್ಲಾ ಅದುರಿದವು. ಶರೀರದ ಸರ್ವಾಯವಗಳು ಗಡಗಡನೆ ಅದುರಿ ರೋಮಗಳೆಲ್ಲವೂ ಸೂಜಿಯ ಮೊನೆಯಂತೆ ಎದ್ದು ನೇರವಾಗಿ ನಿಂತವು. ಎದೆಗೆ ಸಿಡಿಲು ಬಡಿದಂತಾಯಿತು. ಒಳಗೆ ಚಿಲಕ ಹಾಕಿ ನಾವು ಆಟಕ್ಕೆ ಕುಳಿತಿದ್ದೆವು. ಮುಂದು ಗಡೆ ಬಾಗಿಲು ಸಹಾ ಹಾಕೇ ಇರುವುದು ಅಂದ ಮೇಲೆ ಇವಳು ಯಾವ ಕಡೆಯಿಂದ ಒಂದು ನನ್ನ ಪಕ್ಕದಲ್ಲಿ ಕುಳಿತಿರಬಹುದು! ಇಷ್ಟು ಘೋರಾವಸ್ಥೆಯಾಗಿದ್ದರೂ ನಾನು ಅದನ್ನು ಹೊರಗೆ ತೋರ್ಪಡಿಸಲಿಲ್ಲಾ. ನನ್ನ ಮಿತ್ರನೂ ಇವಳ್ಯಾರೆಂದು ನನ್ನನ್ನು ಕೇಳಲಿಲ್ಲಾ, ಅವನ ಜತೆಯಲ್ಲಿ ಮಾತನಾಡುತ್ತಾ ಆಟವನ್ನು ಮುಗಿಸಿ ಧೈರ್ಯವನ್ನು ತಂದುಕೊಂಡೆನು. ಆ ವೇಳೆಗೆ ರಾತ್ರಿ ಹತ್ತು ಘಂಟೆಯಾಗಿತ್ತು.

ನನ್ನ ಹೃದಯೇಶ್ವರಿಯೂ ಒಂದು ಮಾತನಾಡದೆ ಗಂಭೀರವಾಗಿ ನನ್ನ ಪಕ್ಕದಲ್ಲಿ ಕುಳಿತಿದ್ದಳು. ಆಟ ಮುಗಿದನಂತರ ನನ್ನ ಸ್ನೇಹಿತನು—"ಏನೆಯ್ಯಾ ಆಗಲೇ ಘಂಟೆ ಹತ್ತಾಗಿದೆ. ಹಾಗೇ ನನ್ನ ಕಾರಿನಲ್ಲಿ ಹೋಗಿ ಸ್ವಲ್ಪ ತಿಂಡಿತಿಂದು ಬರೋಣ ಬಾ" ಎಂದನು.

ನನಗೂ ಅದೇ ಬೇಕಾಗಿತ್ತು. ನಾನು ಹೊರಟೆನು. ಇವಳೂ ನನ್ನ ಪಕ್ಕದಲ್ಲಿ ಮೋಟಾರ್‌ನಲ್ಲಿ ಕುಳಿತೆನು ನನ್ನ ರಾಣಿಯು ನನ್ನ ಪಕ್ಕದಲ್ಲಿ ಕುಳಿತಳು. ಮೋಟಾರು ನೇರವಾಗಿ ಹೋಟಲಿಗೆ ಹೋಯಿತು. ಅಂತು ಅವಳು ಸಹಾ ನನ್ನ ಜತೆಯಲ್ಲಿ ನನ್ನ ಪಕ್ಕದಲ್ಲಿ ಇದ್ದರೂ ನನ್ನ ಗೆಳೆಯನು ಅವಳ್ಯಾರೆಂದು ಕೇಳದಿದ್ದುದ್ದು ಆಶ್ಚರ್ಯ! ಇವಳೇನು ಅವನ ಕಣ್ಣಿಗೆ ಅದೃಶ್ಯಳೇ? ಅಥವಾ ಅವನು ನಾಚಿಕೆಗೊಂಡು ಕೇಳಲಿಲ್ಲವೇ? ನಾನು ಅವನನ್ನು ಕೇಳಲು ಧೈರ್ಯವಾಗಲಿಲ್ಲ.

ಆ ದಿನ ನನ್ನ ರೂಮಿಗೆ ಬರುವ ವೇಳೆಗೆ ರಾತ್ರಿ ಹನ್ನೊಂದು ಘಂಟೆಯಾಯಿತು. ನಾನು ಅತಿಯಾಗಿ ನನ್ನ ಮನವನ್ನು ಅವಳಿಗೆ ತೋರಲಿಲ್ಲ. ಎಂದಿನಂತೆ ವಿಶೇಷ ಸಂಶಯಕ್ಕಾಸ್ಪದೆ ಬಾರದ ತರದಲ್ಲಿ ವರ್ತಿಸಿದೆನು. ಅವಳಾದರೂ ಸಂಶಯಾಗ್ರಸ್ಥಳಾಗಲಿಲ್ಲ. ಯಥಾ ರೀತಿ ಐದು ಘಂಟೆಗೆ ಹೊರಟು ಹೋದಳು.

ಅವಳು ಆ ಕಡೆ ಹೋದನಂತರ ನನ್ನಲ್ಲಿ ನಾನೇ ಯೋಚಿಸಿದೆನು. ಎರಡು ಬಾಗಿಲುಗಳು ಒಳಗೆ ಹಾಕಿದಾಗ್ಯೂ ಇವಳು ನನ್ನ ಕೊಠಡಿಯೊಳಕ್ಕೆ ಬರಲು ಹೇಗೆ ಸಾಧ್ಯವಾಯಿತು? ಇವಳು ಮಾಯಾಂಗಣಿ ಇರಬಹುದೇ? ಇಲ್ಲಾ ಭೈರವಿಯ ಚಾಕರಳೇ? ಯಕ್ಷಳೆ? ಗಂಧರ್ವಳೆ? ಇದ್ಯಾವುದೂ ಇಲ್ಲವಾದ್ದಲ್ಲಿ ಶಾಕಿಣಿ ಢಾಕಿಣಿ ವರ್ಗದ ಘೋರ ಪಿಶಾಚ ಪರಿವಾರದವಳೇ? ಅಂತು ಅವಳು ಈ ಭೂಲೋಕದಲ್ಲಿನ ಮಾನವಕುಲದವಳಲ್ಲವೆಂದು ತೀರ್ಮಾನಿಸಿದೆ. ನನ್ನ ಗೆಳೆಯನ್ನು ಬಂದ ಮೇಲೆ ಈ ವಿಚಾರವನ್ನೆಲ್ಲಾ ಒಂದೂ ತಪ್ಪದೆ ಹೇಳಬೇಕೆಂದು ತೀರ್ಮಾನಿಸಿ ಅವನ ಆಗಮನವನ್ನೇ ನಿರೀಕ್ಷಿಸುತ್ತ ಹಾಸಿಗೆಯಲ್ಲೇ ಬಿದ್ದಿದೆ.

ಸುಮಾರು 7-30 ಘಂಟೆಗೆ ಅವನ ಮೋಟಾರಿನ ಶಬ್ದ ಕೇಳಿಸಿತು. ಅವನೂ ನನ್ನ ಒಳಿ ಬಂದು ಕುಳಿತು "ಏನಯ್ಯಾ ನೆನ್ನೆ ರಾತ್ರೆ ಒಂದು ವಿಚಿತ್ರತರನಾಗಿದ್ದೆ ಏನು ವಿಚಾರ?" ಎಂದನು.

ಆ ಮಾಯಾವತಿಯು ಭೇಟಿಯಾದಂದಿನಿಂದ ತತ್ಕಾಲದವರೆಗೆ ನಡೆದ ಸಮಸ್ತವನ್ನೂ, ಪಗಡೆ ಆಡುತ್ತಿದ್ದಾಗ ಎಲ್ಲಾ ಬಾಗಿಲುಗಳನ್ನು ಹಾಕಿದ್ದರೂ ಅವಳು ಒಳಗೆ ಒಂದು ಕುಳಿತಿದ್ದನ್ನು ಕಂಡು ತನಗುಂಟಾದ ಅನಿರ್ವಚನೀಯವಾದ ಭಯ. ಎಲ್ಲವನ್ನೂ ಒಂದೂ ಬಿಡದೆ ಹೇಳಿದೆನು.

[ಸಶೇಷ

ಸತ್ಯವಾದಿ

ಕಾಂಗ್ರೆಸ್

ಮೊನ್ನೆ ನಡೆದ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗಿನಲ್ಲಿ ಕಾಂಗ್ರೆಸ್ಸಿನ ನಾಯಕತ್ವವನ್ನು ಮಹಾತ್ಮ ಗಾಂಧಿಯವರಿಗೆ ವಹಿಸತಕ್ಕದೆಂದು ತೀರ್ಮಾನಿಸಲಾಗಿದೆ. ಮಹಾತ್ಮ ಗಾಂಧಿಯವರೂ ನಾಯಕತ್ವವನ್ನು ವಹಿಸಲು ಸಮ್ಮತಿಸಿರುವರೆಂದು ತಿಳಿಸಿರುತ್ತಾರೆ. ಗಾಂಧೀಜಿಯವರ ನಾಯಕತ್ವದ ವಿಷಯದಲ್ಲಿ ಕೆಲವರಿಗೆ ತೃಪ್ತಿಕರವಾಗಿರಲಾರದಾದರೂ, ಬಹುಮಂದಿಗೆ ಒಪ್ಪಿತವೆಂದು ಹೇಳಲಾಗಿದೆ. ಗಾಂಧೀಜಿಯವರೇನೋ ಸಧ್ಯಕ್ಕೆ ಕಾನೂಭಂಗ ಚಳವಳಿ ಹೂಡಲು ಒಪ್ಪಲಾರರಾದರೂ, ಭಾರತವು ಯುದ್ಧದಲ್ಲಿ ಭಾಗವಹಿಸುವ ವಿಷಯವನ್ನು ಹೇಗೆ ಇತ್ಯರ್ಥಮಾಡುವರೋ ನೋಡಬೇಕು ಶಾಂತಪ್ರಿಯರಾದ ಮಹಾತ್ಮಾ ಗಾಂಧಿಯವರು ಲೋಕ ಶಾಂತಿಗಾಗಿ ಮತ್ತೇನಾದರೂ ಅಸ್ತ್ರ ಹೂಡುವರೋ ಏನೋ ನೋಡಬೇಕು.

ಒಂದು ಸತ್ಕಾರಕೂಟ

ತಾಯಿನಾಡು ಪತ್ರಿಕೆಯ ಮಾಲೀಕರೂ, ಸಂಸ್ಥಾನದ ಪತ್ರಿಕೋದ್ಯೋಗಿ ಸಂಘದ ಅಧ್ಯಕ್ಷರೂ ಆದ ಶ್ರೀ ಪಿ. ಆರ್. ರಾಮಯ್ಯನವರು ಕಳೆದ ವಾರ ರಾಜಧಾನಿಯ ಜರ್ನಲಿಸ್ಟ್ ಆಸೋಸಿಯೇಷನ್ ಆಫೀಸಿನಲ್ಲಿ ಸ್ಥಳದ ಪತ್ರಿಕೋದ್ಯೋಗಿಗಳನ್ನು ಬರಮಾಡಿಕೊಂಡು ಸತ್ಕಾರ ಮಾಡಿಸಿದರು. ಉಪಾಹಾರ ನಂತರ ಶ್ರೀ ರಾಮಯ್ಯನವರು ಪುಟ್ಟಭಾಷಣಮಾಡಿ ಪತ್ರಿಕಾಕರ್ತರ ಕಷ್ಟ ನಷ್ಟ ಸುಖ ದುಃಖ, ಜವಾಬ್ದಾರಿ ಮುಂತಾದ ವಿಷಯಗಳನ್ನು ವಿವರಿಸಿ, ಬರುವ ನವೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಮ್ಮೇಳನವನ್ನು ನಡೆಸಬೇಕೆಂದಿರುವ ತಮ್ಮ ಆಕಾಂಕ್ಷೆಯನ್ನು ತಿಳಿಸಿದರು, ಮತ್ತು ಆ ಸಮ್ಮೇಳನವಲ್ಲಿ ಸಹಕರಿಸಬೆ ಕೆಂದು ಕೋರಿದರು. ಆವರ ಆಶಯವನ್ನು ಶ್ಲಾಘಿಸಿ, ಸಹಾಕರಿಸುವುದಾಗಿ ಸಭೆಯಲ್ಲಿದ್ದ ಹಲವರು ತಿಳಿಸಿದರು, ಮತ್ತು ಸತ್ಕಾರಕ್ಕಾಗಿ ಶ್ರೀ ರಾಮಯ್ಯನವರನ್ನು ವಂದಿಸಿದರು.

ಬರ್ಲಿನ್ನಿನ ಮೇಲೆ ಬ್ರಿಟಿಷ್ ವಿಮಾನದಾಳಿ ನಡೆಯಿತು

ಅಗ್ನಿಜನಕ ಬಾಂಬುಗಳನ್ನು ಸುರಿದು ತುಂಬಾ ನಷ್ಟವನ್ನುಂಟುಮಾಡಿದೆ.

ಲಂಡನ್ನಿನ ಮೇಲೆ ಜರ್ಮನ್ ವಿಮಾನ ದಾಳಿ ನಡೆಯುತ್ತಲೇ ಇದೆ

---

12 ನೇ ತಾರೀಖು ರಾತ್ರೆ ಬಕಿಂಗ್‌ಹ್ಯಾಂ ಅರಮನೆ ಮೇಲೆ ಬಾಂಬು ಬಿದ್ದವು. ದೈವವಶಾತ್ ಅಲ್ಲಿದ್ದ ಸಾರ್ವಭೌಮ ದಂಪತಿಗಳಿಗೆ ಏನೂ ಅಪಾಯವಾಗಲಿಲ್ಲ

ಹಂಗೇರಿಯಲ್ಲಿ ಪೌಲ್ ಕೆರ್ನ್‌ನ ಎಂಬ ನಿದ್ಧೆಯನ್ನೆ ಮಾಡದ ಪುಣ್ಯಾತ್ಮನೊಬ್ಬನು ವಾಸಿಸಿದ್ದಾನೆ. ಕಳೆದ ಮಹಾಯುದ್ಧದಲ್ಲಿ ಪಡೆದ ಗಾಯ ಇವನಿಂದ ನಿದ್ದೆಯನ್ನೋಡಿಸಿತು; ಇವನನ್ನು ಉಳಿಸಿತು. ಪೌಲ್ ಕೆರ್ನ್, ಪೊಲೀಸ್ ಯುದ್ಧಭೂಮಿಯಲ್ಲಿ ೧೯೧೫ ರ ಜೂನ್ ತಿಂಗಳಲ್ಲಿ ಕಾದುತ್ತಿದ್ದಾಗ ಒಂದು ಗುಂಡು ಇವನ ತಲೆಗೆ ತಗುಲಿತು. ಆ ದಿನದಿಂದ ನಿದ್ರೆಯನ್ನೇ ಈತ ಕಂಡಿಲ್ಲ.

ಲಂಡನ್ನಿನ ನಾಶವಾದ ಭಾಗದಲ್ಲಿ ಮಿಷ್ಬರ್ಚಿಲ್ಲರು ತಿರುಗಾಡಿ ನೋಡಿ ಬಂದರು ಕ್ಯಾಂಟರ್ ಬರಿಯಾ ಬರಿಯ ಅರ್ಚ್ ಬಿಶಪರು ನಾನು ಹಿಂದಿನ ೨ ರಾತ್ರಿಗಳನ್ನು ಕಳೆದಂತೆ ತಿಇನ್ನು ಮೇಲೆಕಳೆಯಲಾರೆನು ೮ ತಾಸುಗಳ ವರೆಗೆ ಒಂದೇ ಸವನೇ ಕ್ಷಣ ಕ್ಷಣಕ್ಕೆ ಬಾಂಬು ಬೀಳಹತ್ತಿದರೆ ನಿದ್ದೆ ಹತ್ಯಬೇಕಾದರೂಹೇಗ ಒಂದು ಭಾಂಬ ಬಿದ್ದ ನಂತರ ಎರಡನೇಯದೆಲ್ಲಿ ಬೀಳುವದೆಂದು ನನಗೆ ಎದೆಯಲ್ಲಿ ಕಂಪನತುಂಬುತ್ತಿತ್ತು' ಅಂದರು. ಲಂಡನ್ನಿನ ಲಾರ್ಡ್ ಮೇಯರವರು ಹಾವಳಿಗೆ ಈಡಾದವರ ಸಹಾಯಕ್ಕಾಗಿ ಹಣ ಕೂಡಿಸುತ್ತಿದ್ದಾರೆ,

ಜರ್ಮನಿಯ ಜಂಕರ ಕಂಪನಿಯವರು ಹೊರಡಿಸಿದ ಹೊಸ ವಿಮಾನಗಳು ತಾಸಿಗೆ ೩೧೦ ಮೈಲು ವೇಗದಿಂದ ಹೋಗುವವು. ಅವುಗಳಲ್ಲಿ ಒಬ್ಬರಿಗೆ ಕೂಡ್ರಲು ಸ್ಥಳವಿರುವದು. ಬುಧವಾರದ ದಿನ ಲಂಡನ್ನಿನ ಮೇಲೆ ಅದಥಾಳಿಯಲ್ಲಿ ಇವನ್ನೇ ಉಪಯೋಗಿಸಿದರಂತೆ.

ಇಟಲಿಯವರು ಅಲ್ಬೇನಿಯಕ್ಕೆ ತಮ್ಮಗಳನ್ನು ಕಳುಹಿಸುತ್ತಿದ್ದಾರೆ. ೨ ಲಕ್ಷ ಇಟಲಿ ಸೇನೆಗಳು ಈಗ ಅಲ್ಲಿವೆ. ಆದು ಗ್ರೀಸಿನ ಯುಗೋಸ್ಲಾವಿಯದ ಮೇಲಿನ ಕಣ್ಣೆಂದು ಹೇಳಲಾಗಿದೆ ಅಲ್ಲದೆ ರೋಮಿನ ರೇಡಿಯೋ ಪುನಃ ಗ್ರೀಸಿನ ವಿರುದ್ಧ ಪ್ರಚಾರಕಾರ್ಯ ನಡೆಸಲಾರಂಭಿಸಿದೆ; ಗ್ರೀಸ್ ಈಗ ತಂಟೆಖೋರ ರಾಷ್ಟ್ರವೆಂದು ಆದನ್ನು ಎಚ್ಚರಿಸಿದೆ.

ಮಧ್ಯಪ್ರಾಚ್ಯದಲ್ಲಿ ಕ್ರಿಶ್ಚಿಯನ್ ಮಿಷನರಿಗಳು ಅಲ್ಲಿಯ ಭಿಲ್ಲರಿಗೆ ಸಾಲಕೊಟ್ಟು ಅವರ ಮಕ್ಕಳನ್ನು ಈಡು ಮಾಡಿಕೊಂಡು, ನಂತರ ಕ್ರಿಶ್ಚಿಯನ್ ಮತಕ್ಕೆ ಉಪಾಯಾಂತರದಿಂದ ಸೇರಿಸಿಕೊಳ್ಳುವರೆಂದು ಹೇಳಲಾಗಿದೆ.

ಕಲ್ಕತ್ತಾದಲ್ಲಿ ಘೋಷಾಪದ್ಧತಿ ನಿರೋಧಿಸಿ ಸ್ತ್ರೀಯರು ಮೆರಣಿಗೆ ನಡೆಸಿದರು

ನೋಬೆಲ್ ಪಾರಿತೋಷಕ

ನಿಜಾಮ ಹೈದರಾಬಾದ್ ಉಸ್ಮಾನಿಯ ವಿದ್ಯಾಪೀಠದ ಪ್ರಾಧ್ಯಾಪಕರಾದ ಡಾ|| ರಜೀಉದ್ದೀನ ಇವರಿಗೆ ಪದಾರ್ಥವಿಜ್ಞಾನ ಶಾಸ್ತ್ರದ ಬಗ್ಗೆ ಈ ವರ್ಷದ ನೋಬೆಲ್ ಪಾರಿತೋಷಕ ದೊರಕಿಸಿದವರಲ್ಲಿ ಇವರು ಹಿಂದುಸ್ಥಾನದ ಮೊದಲನೆ ಮುಸಲ್ಮಾನರಿದ್ದು ಇಡೀ ಹಿಂದುಸ್ಥಾನದ ದೇಶದಿಂದ ೩ ನೆಯವರಾಗಿರುತ್ತಾರೆ. ಈ ಮೊದಲು ಈ ಪಾರಿತೋಷಕವನ್ನು ದೊರಕಿಸಿದ ಹಿಂದಿಯರು ಡಾ|| ರವೀಂದ್ರಥನಾಟಾಗೋರ ಮತ್ತು ಸರ್ ಸಿ.ವಿ. ರಾಮನ್ ಇವರು ಇರುತ್ತಾರೆ.

ಎಂಥಾ ಚಾಲೋಕು!

ಕ್ರೈಸ್ತಮತ ಪ್ರಚಾರವನ್ನು ಮಾಡಿ ಚೈನಾದೇಶಿಯರನ್ನೆಲ್ಲಾ ಕ್ರೈಸ್ತಮತಾವಲಂಬಿಗಳನ್ನಾಗಿ ಮಾಡಿ ತನ್ಮೂಲಕ ತಾನು ಚೈನಾದೇಶಿಯರ ಪ್ರೀತಿಯನ್ನು ಸಾಧಿಸಿ ಆ ದೇಶವನ್ನು ತನ್ನ ಅಧೀನಪಡಿಸಿಕೊಳ್ಳಬೇಕೆಂಬ ಯೋಚನೆ ಜಪಾನು ಮಾಡುತ್ತಿದೆ. ಈ ಯೋಚನೆಯು ಸಾಧುವಾದುದೂ ಅಲ್ಲ; ಸಾಧ್ಯವಾಗುವಂಥಾದ್ದೂ ಅಲ್ಲ. ಚೈನಾ ದೇಶಿಯರು ಈಗ ಹಿಂದಿನಂತೆ ನಿದ್ದೆ ಮಾಡುತ್ತಿಲ್ಲ. ಎಚ್ಚರಗೊಂಡಿದ್ದಾರೆ. ಸರ್ ಯ್ಯಟ್ ಸೆನ್ ರವರ ಉಪದೇಶ ವಾಕ್ಯಗಳು ಅವರ ದೇಹದ ಪ್ರತಿಭಾಗದಲ್ಲಿ ಪ್ರತಿಧ್ವನಿಸುತ್ತಲಿವೆ. ಅಲ್ಲದೆ, ಜಪಾನು ಕೊರಿಯಾವನ್ನು ಆಕ್ರಮಿಸಿದನಂತರ ಕ್ರೈಸ್ತಮತ ಪ್ರಚಾರದಿಂದ ಅದಕ್ಕೆ ಯಾವ ಉತ್ತಮಸ್ಥಿತಿ ಪ್ರಾಪ್ತವಾಗಿರುವದೆಂಬುದನ್ನು ಚೈನೀಯರು ಚೆನ್ನಾಗಿ ಅರಿತಿರುವರು.

ವರ್ಷ ೧೪೦ ಆಯಸ್ಸು

ಬೆರಿಲ್ಲಿಯ ಒಬ್ಬ ಅಗಸನು ತನ್ನ 140 ನೆಯ ವಯಸ್ಸಿನಲ್ಲಿ ಈಚೆಗೆ ಮೃತನಾದನು. ಭಾರತ ದೇಶದಲ್ಲಿ ಶಿಪಾಯಿ ದಂಗೆ ನಡೆದಾಗ ಅಂದರೆ 1857 ರಲ್ಲಿ ಈತನಿಗೆ 57 ನೇ ವಯಸ್ಸು ನಡೆಯುತ್ತಿತಂತೆ. ಈತನ ಹೆಂಡತಿಯ ವಯಸ್ಸು 90 ಆಗಿದೆಯಂತೆ.

ಅಮೇರಿಕಾ ರೆಡ್‌ಕ್ರಾಸ್ ಸಂಘದವರ ಸಹಾಯ

ಯುದ್ಧದಲ್ಲಿ ಗಾಯಗೊಂದಿದವರಿಗಾಗಿ ದಿನಂಪ್ರತಿ 80 ಗ್ಯಾಲನ್ನುಗಳ ಮನುಷ್ಯ ರಕ್ತವು ಅವಶ್ಯಕವಾಗಿರುವದರಿಂದ ಅಮೇರಿಕಾ ರೆಡ್ ಕ್ರಾಸ್ ಸಂಘವು ಇಷ್ಟು ರಕ್ತವನ್ನು ಕಳುಹಿಸಲು ಒಪ್ಪಿದೆ. ವಿಮಾನಗಳ ಮೂಲಕ ದಿನಂಪ್ರತಿ ರಕ್ತವು ಕಳುಹಿಸಲ್ಪಡುವದು.

ಒಬ್ಬ—ನನ್ನ ತಲೆ ಕೂದಲು ಒಂದೊಂದಾಗಿ ಉದುರಿ ಹೋಗುತ್ತಾ ಇದೆ. ಇದಕ್ಕೆ ಏನು ಉಪಯೋಗಿಸುವುದು.

ಇನ್ನೊಬ್ಬ—ಹಾಗಾದರೆ ನನ್ನ ಹತ್ತಿರ ಒಂದು ಖಾಲಿ ಡಬ್ಬ ಇರಬೇಕು ಕೊಡುತ್ತೇನೆ, ಅದನ್ನು ಉಪಯೋಗಿಸಿರಿ.

ಮೃತ್ಯು ಸರೋವರ

ರಾಜಪುತ್ರಸ್ಥಾನದ ಪೂರ್ವಭಾಗದಲ್ಲಿ ಸಂಜಪುಲೀ ಎನ್ನುವ ಪ್ರದೇಶದ ಸಮೀಪದಲ್ಲಿ ಮನುಷ್ಯರನ್ನೂ ಪ್ರಾಣಿಗಳನ್ನೂ ಸಾಯಿಸುವ ಸರೋವರವೊಂದಿದೆ. 3-8-40 ರಲ್ಲಿ 5 ಮಂದಿ ಪ್ರಯಾಣೀಕರು ಆ ಮಾರ್ಗದಲ್ಲಿಯೇ ಹೋಗುತ್ತಾ ಬಾಯಾರಿಕೆಯಾಗಲು ಆ ಕೆರೆಯಲ್ಲಿ ಮೊಣಕಾಲು ಆಳ ನೀರು ಬರುವಷ್ಟು ಸ್ಥಳದಲ್ಲಿ ಇಳಿದರು. ಕೂಡಲೇ ಆ 5 ಮಂದಿಯೂ ನೀರಿನಲ್ಲಿ ಮುಳುಗಿಸತ್ತರು. ಮರಳ್ಗಾಡಿನ ಮಧ್ಯೆ ಇರುವ ಕೆರೆಯು ಇದು, ನೀರಿನೊಂದಿಗೆ ಅವ್ಯತವಾದ ಮರಳಿನ ಮೇಲೆ ಕಾಲಿಡುತ್ತಲೂ ಅದು ಒಳಕ್ಕೆ ಎಳೆದುಕೊಂಡುಹೋಗಿ ಆಳವಾದ ಆ ಕೆರೆಯಲ್ಲಿ ಬೀಳಿಸುವದು.

ಯುದ್ಧದ ವಿಷಯ

ಪತ್ರಿಕೆಗಳಲ್ಲಿ ನೋಡಿದರೆ ಎರಡು ಕಡೆಯವರೂ ಯಾವತ್ತಾ ಹಸವನ್ನು ನೋಡಿಸಿ ಯುದ್ಧಮಾಡುತ್ತಿರುವಂತೆ ಕಾಣಬರುತ್ತಿದೆ ಅಮೇರಿಕದಿಂದ ಯುದ್ಧಕ್ಕೆ ಬೇಕಾದ ಪದಾರ್ಥಗಳ ಸರಬರಾಯಿಯೂ ಆಗುತ್ತಿರುವುದರಿಂದ ಇಂಗ್ಲೆಂಡಿಗೆ ಅನುಕೂಲಗಳು ಹೆಚ್ಚಾಗಿವೆ. ಹಿಟ್ಲರಿನಿಗೆ ಹೊಸದಾಗಿ ಆಕ್ರಮಿಸಿಕೊಂಡಿರುವ ದೇಶೀಯರು ಪ್ರತಿಕೂಲರಾಗಿರುವದು ಮಾತ್ರವೇ ಅಲ್ಲ. ಜರ್ಮನಿಯವರಲ್ಲಿ ಅನೇಕರಿಗೂ ಯುದ್ಧವು ಬೇಡವಾಗಿದೆ. ಯಾವ ತಪ್ಪೂ ಮಾಡದಿರುವ ಸಿವಿಲ್ ಪ್ರಜೆಗಳ ನಾಶವನ್ನು ಯಾರು ತಾನೇ ನ್ಯಾಯವೆಂದು ಹೇಳಬಲ್ಲರು. ಇಷ್ಟರಲ್ಲಿಯೇ ಜರ್ಮನಿಯು ಸ್ವಿಟ್ಜರ್ಲೆಂಡನ್ನು ಆಕ್ರಮಿಸಿಕೊಳ್ಳುವುದರಲ್ಲಿದೆ. ಸ್ವೈಸನ್ನೂ ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ಯತ್ನಿಸುತ್ತಲಿದೆ. ವಿಶ್ವಾಮಿತ್ರರೂಪನಾದ ಹಿಟ್ಲರನು ಎಷ್ಟು ಪ್ರಬಲನಾದರೂ ಅಂತ್ಯದಲ್ಲಿ ಪಶಿಷ್ಟರೂಪರಾದ ಬ್ರಿಟಿಷರ ಬಲವನ್ನೂ ಧೈರ್ಯ ಸಾಹಸಗಳನ್ನೂ ಮೆಚ್ಚಲೇಬೇಕು.

ಮೋಕ್ಷಗುಂಡಂ ಕೃಷ್ಣಮೂರ್ತಿಗಳ ಖೂನಿ ಪ್ರಕಟನೆ

ಕಳೆದ 12 ನೇ ತಾರೀಖಿನ ದಿವಸ ಸೆಷನ್ಸ್ ಜಡ್ಜರು ತೀರ್ಮಾನವನ್ನಿತ್ತರು.

ಒಂದನೇ ಆಪಾದಿತನಾದ ನಾರಾಯಣರೆಡ್ಡಿಗೂ ಅವರ ಸಹಾಯಕರಾಗಿದ್ದ 2 ಮತ್ತು 3 ನೇ ಆಪಾದಿತರುಗಳಾದ ಮನಿಗ ಮತ್ತು ರಾಮ ಮೂರು ಜನಗಳಿಗೂ ಮರಣದಂಡನೆ ವಿಧಿಸಲಾಗಿದೆ. ನಾಲ್ಕನೇ ಆಪಾದಿತನಾದ ಮದ್ದೂರನನ್ನು ಮತ್ತು ಐದನೇ ಆಪಾದಿತರಾದ ಶ್ರೀ|| ವೆಂಕಟರಂಗಯ್ಯಗಾರ್ಯರನ್ನೂ ನಿರಪರಾದಿಗಳೆಂದೂ ಖುಲಾಸೆ ಮಾಡಲಾಗಿದೆ. ಆದರೆ ವೆಂಕಟರಂಗಯ್ಯಂಗಾರ್ಯರ ಮೇಲೆ ಫೋರ್ಜರಿ ಮೊಖದ್ದಮೆ ಇರುವುದರಿಂದು. ಅಪ್ರೂವರ್ ಪೊನ್ನಾಂಬಲಂನನ್ನು ಡಿಸ್‌ಚಾರ್ಜ್ ಮಾಡಲಾಗಿದೆ. ಫೋರ್ಜರಿ ಮೊಖದ್ದಮೆ ವಿಷಯಕ್ಕಾಗಿ ಅವರನ್ನೂ ಬಂಧನದಲ್ಲೇ ಇಡಲಾಗಿದೆ. ಶ್ರೀ ವೆಂಕಟರಂಗಯ್ಯಂಗಾರ್ಯರಪರ ಜಾಮೀನು ಅರ್ಜಿ ಆರ್ಗ್ಯುಮೆಂಟು ನಡೆದು ತೀರ್ಪಿಗೆ ಇಡಲಾಗಿವೆ.

ವಿವಿಧ ವಿಷಯಗಳು

ಪಾಶ್ಚಾತ್ಯ ವಿದ್ವಾಂಸರು ಸಭೆ ನಡೆಸಿ ಪರಿಶೋಧನೆ ಮಾಡಿ, ಯಾವ ಭಾಷೆಯನ್ನು ಬೇಗ ಮಾತನಾಡಬಹುದೆಂದು ತೀರ್ಮಾನಿಸಿದ್ದಾರೆ. ಫ್ರೆಂಚ್ ಭಾಷೆಯಲ್ಲಿ ಬೇಗ ಮಾತನಾಡಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಇಂಗ್ಲೀಷನ್ನು ನಿಮಿಷಕ್ಕೆ 120 ಅಕ್ಷರಗಳಂತೆಯೂ, ಜರ್ಮನ್ ಭಾಷೆಯನ್ನು 240 ಅಕ್ಷರಗಳಂತೆಯೂ, ಜಪಾನೀ ಭಾಷೆಯನ್ನು 310 ಅಕ್ಷರಗಳಂತೆಯೂ ಫ್ರೆಂಚ್ ಭಾಷೆಯನ್ನು 340 ಅಕ್ಷರಗಳಂತೆಯೂ ಉಚ್ಚರಿಸಬಹುದು ಎಂದು ನಿಶ್ಚಯಿಸಿರುವರು.

ಕೂಡಲೆ ಭಾರತದೇಶಕ್ಕೆ ಡೊಮಿನಿಯನ್ ಸ್ಟೇಟಸ್ ಕೊಡತಕ್ಕದ್ದೆಂದೂ ಹಾಗೆ ಮಾಡಿದರೇನೇ ಬ್ರಿಟಿಷ್ ಇಂಡಿಯಾಗಳ ಮೈತ್ರಿಯು ವೃದ್ಧಿಯಾಗುವುದೆಂದೂ ವೇಲ್ಸಾಶಾಲಿಗಳಾದ ಜಾರ್ಜ್ ಬರ್ನಾರ್ಡ್‌ಷಾರವರು ಘೋಷಿಸಿರುವರು.

ಹೆಂಡತಿಯು ಸತ್ತಲ್ಲಿ, ಆಂಧವರು ಗಂಡಂದಿರು ವಿಧವೆಯರನ್ನು ಮಾತ್ರ ವಿವಾಹಮಾಡಿಕೊಳ್ಳಬೇಕಾಗಲಿ, ಬೇರೆಯವರನ್ನು ಮದುವೆಯಾಗಬಾರದೆಂಬ ಸಾರಾಂಶವುಳ್ಳ ಅಧಿಕಾರೇತರ ಬಿಲ್ಲೊಂದನ್ನು 6—9—40 ರಲ್ಲಿ ಬಂಗಾಳ ನ್ಯಾಯ ವಿಧಾಯಕ ಸಭೆಯ ಮುಂದೆ ಶ್ರೀ ಮನ ಮೋಹನ ದಾಸರವರು ಇಟ್ಟರು. ಈ ಬಿಲ್ಲಿನಿಂದ ಆ ಪ್ರಾಂತ್ಯದಲ್ಲಿಯ 5 ರಿಂದ 25 ವಯಸ್ಸಿನೊಳಗಿನ ವಿಧವಯರೆಲ್ಲರೂ ಮದುವೆಯಾಗುವರೆಂದು ಭಾವಿಸಲಾಗಿದೆ.

ಬಾಣಂದೂರು ಹರಿಜನ ಸಮ್ಮೇಳನದಲ್ಲಿ ಅಧ್ಯಕ್ಷರು ಮಾಡಿದ ಭಾಷಣದಲ್ಲಿನ ಒಂದು ವಿಷಯವಿದು— ಸರ್ಕಾರದವರು ಕ್ಲೋಸ್‌ಪೇಟೆಯಲ್ಲಿ ಪಾನನಿರೋಧನನ್ನು ಆಚರಣೆಗೆ ತರಿದು ಪರೀಕ್ಷಿಸುತ್ತಿದ್ದಾರೆ. ಆದರೆ ನಿಮ್ಮವರು ಸರಿಯಾದ ಹೊರತು ಅವರೇಸು ಮಾಡಿದರೂ ಪ್ರಯೋಜನವಿಲ್ಲ. ಮೂರು ಸೇರಿಗಿಂತ ಹೆಚ್ಚು ಹೆಂಡವನ್ನಿಟ್ಟುಕೊಂಡರೆ, ಅಂತಹವನಿಗೆ ಶಿಕ್ಷೆಯಾಗುತ್ತದೆಂದು ವಿಧಿಸಿದ್ದಾರೆ. ಒಬ್ಬನು ಒಂದು ಗಡಿಗೆ ತುಂಬ ಹೆಂಡವನ್ನಿಟ್ಟುಕೊಂಡು ಹೋಗುತ್ತಿದ್ದುದನ್ನು ಅಬಕಾರ್ಯರು ಹಿಡಿದಾಗ ಸ್ವಲ್ಪ ಇರಿ, ಎಂದು ಹೇಳಿ ಆತನು ಅವರೆದುರಿಗೆ ಅಷ್ಟು ಹೆಂಡವನ್ನು ಕುಡಿದುಬಿಟ್ಟು ಈಗ ಏನು ಹೇಳುತ್ತೀರಿ ಎಂದನು. ಇಂತಹ ಸಂದರ್ಭಕ್ಕೆ ಏನು ಮಾಡುತ್ತೀರಿ? ಕಾನೂನು ಇದ್ದುತಾನೇ ಏನು ಮಾಡಬಹುದು? ಆದುದರಿಂದ ಕಾನೂನು ಮಾಡುವುದರಿಂದ ಮಾತ್ರವೇ ಪ್ರಯೋಜನವಿಲ್ಲ. ನಾನು ಹೇಳಿದ ಹಾಗೆ ನೀವು ನಿಮ್ಮ ಅಭ್ಯಾಸಗಳನ್ನು ಉತ್ತಮಪಡಿಸಿಕೊಳ್ಳಬೇಕು.

ಇಂಗ್ಲೆಂಡಿನ ಅನೇಕ ಯುದ್ಧ ಸಾಮಗ್ರಿ ತಯಾರಿಸುವ ಅನೇಕ ಕಾರ್ಖಾನೆಗಳಲ್ಲಿ ಸಂಗೀತದ ಏರ್ಪಾಡು ಮಾಡಿ, ಕೆಲಸಗಾರರಿಗೆ ಪುರಸೊತ್ತು ಇರುವ ಹೊತ್ತಿನಲ್ಲಿ ಕೇಳಲು ಅನುಕೂಲ ಮಾಡಿದ್ದಾರೆ. ಇದರಿಂದ ಕೆಲಸಗಾರರಿಗೆ ಆಯಾಸ ಕಡಮೆಯಾಗಿ ಹೆಚ್ಚು ಕೆಲಸ ಮಾಡಲು ಉತ್ತೇಜನವಾಗುವುದೆಂದು ಕಂಡುಬಂದಿದೆ.

ಸುಲಭ ಚಿಕಿತ್ಸೆ

ಎಲ್ಲಾ ಉದರ ವ್ಯಾಧಿಗಳಿಗೆ—ಒಣಗಿದ ಬಾಳೇಪಟ್ಟೆಯನ್ನು ಹಸುವಿನ ಹಾಲಿನಲ್ಲಿ ಮುದ್ದೆಯಾಗುವಂತೆ ಅರೆದು ಪುಟವನ್ನು ಹಾಕಿದಲ್ಲಿ ಭಸ್ಮವಾಗುವದು. ಅದನ್ನು ನೀಂನೊಂದಿಗೆ ಸೇವಿಸುತ್ತ ಬಂದಲ್ಲಿ ಎಲ್ಲಾ ಉದರವ್ಯಾಧಿಗಳೂ ಗುಣವಾಗುವವು.

ಹೊಟ್ಟೆ ಉಬ್ಬಿಕೊಂಡು ಕೈಕಾಲು ಸಣ್ಣಗಾಗಿದ್ದಲ್ಲಿ—ಹಿಪ್ಪಲಿ ಚೂರ್ಣವನ್ನು ಕಳ್ಳೀ ಹಾಲಿನಲ್ಲಿ ನೆನಸಿ, ಒಣಗಿಸಿ ಒಂದು ಚಿಟಕಿಯಿಂದ ಮೂರು ಚಿಟಕಿಗಳವರೆಗೂ ಕಲ್ಲಚ್ಚಿನಲ್ಲಿ ಕಲಸಿ ಕುಡಿಸಿದರೆ ಗುಣವಾಗುವದು.

ಮೂಲವ್ಯಾಧಿಗೆ—(1) ಆಲದ ಎಲೆಯನ್ನು ಸುಟ್ಟು ಕರಕುಮಾಡಿ ಎಣ್ಣೆಯಲ್ಲಿ ಕಲಸಿ ಲೇಪಿಸಿಕೊಳ್ಳುವದು. (2) ಬೇವಿನಸೊಪ್ಪು, ಅರಳೀಯೆಲೆ, ಬೆಲ್ಲ ಇವನ್ನು ಕಲ್ಲಚ್ಚಿನಲ್ಲಿ ಕಲಸಿ ಲೇಪಿಸುವದು.

ಕುಷ್ಟವ್ಯಾಧಿಗೆ—ಶುದ್ಧಿಮಾಡಿದ ಗಂಧಕವನ್ನು ದಿನಂಪ್ರತಿ ರಾತ್ರಿಗಳಲ್ಲಿ ಹಾಲಿನೊಂದಿಗೆ ಕಾಯಿಸಿ ಕುಡಿಯುತ್ತ ಒರುವದು. ಹೀಗೆ 1 ಪಕ್ಷಮಾಡುವದು. ಅಥವಾ ಶುದ್ಧಿಮಾಡಿದ ಗಂಧಕ, ತ್ರಿಫಲಗಳು ಸಮಚೂರ್ಣ ಬೆರಿಸಿ ತುಪ್ಪ ಅಥವಾ ಜೇನುತುಪ್ಪದೊಂದಿಗೆ ಒಂದು ತಿಂಗಳು ಉಪಯೋಗಿಸುವದು. ಪಥ್ಯ—ಹುಳಿ ಉಪ್ಪು, ಖಾರ, ಬೆಲ್ಲ, ಎಳ್ಳು ಉದ್ದು ಮೊಸರು ಹಾಲು, ದ್ವಿದಳ ಧಾನ್ಯಗಳು, ಬೇಳೆ ವರ್ಜ್ಯ.

ವಿದಾಹಕ್ಕೆ ಪರ್ಪಾಟ್ಟಕ, ಮೋಡಿ ಸಮಭಾಗವನ್ನು ಹಸೀಶುಂಠಿಯಲ್ಲಿಯೂ ಬೇವಿನ ತ್ವಕ್ಕಿನ ರಸದಲ್ಲಿಯೂ ಮರ್ಧಿಸಿ ಕಡಲೇ ಪ್ರಮಾಣ ಮಾತ್ರೆಗಳನ್ನಾಗಿ ಮಾಡಿಟ್ಟುಕೊಂಡು ಬಾಯಿಯಲ್ಲಿ ಹಾಕಿಕೊಂಡು ರಸವನ್ನು ನುಂಗುತ್ತಿರುವದು. ವಿದಾಹವು ಶಮನವಾಗುವದು. (ಓಂ)

ಬ್ರಿಟೀಷ್ ಸರ್ಕಾರದವರು ಹಿಂದೀ ಸ್ವಾತಂತ್ರ್ಯವನ್ನು ಮಾನ್ಯ ಮಾಡದ್ದರಿಂದ ಕಾಂಗ್ರೆಸ್ಸು ಈಗಾಗಲೇ ಕೈಕೊಂಡ ಅಸಹಕಾರ ಪ್ರಯೋಗವನ್ನು ಹೆಚ್ಚು ಪರಿಣಾಮಕಾರಿಯಾಗಿ ಪ್ರಾರಂಭಿಸಬೇಕೆಂಬ ಒಂದು ಗೊತ್ತುವಳಿಯನ್ನು ಇದೇ ಏ ಐ. ಸಿ. ಸಿ. ಸಭೆಯಲ್ಲಿ ಮಂಡಿಸಲು ಶ್ರೀ ಯುಸೂಫ್ ಅಲ್ಲಿಯವರು ಸೂಚನೆ ಮಾಡಿರುತ್ತಾರಂತೆ.

ಪಶ್ಚಿಮ ದೇಶದಲ್ಲಿ ಯುದ್ಧವು ನಡೆಯುತ್ತಿರುವುದರಿಂದ ಅದನ್ನೇ ಒಂದು ಅವಕಾಶವಾಗಿ ಕಲ್ಪಿಸಿಕೊಂಡು ಜಪಾನು ಪೆಸಿಫಿಕ್ ಮಹಾಸಾಗರದ ಆಧಿಪತ್ಯವನ್ನು ಹೊಂದಲು ಯತ್ನಿಸುತ್ತಿದೆ. ಜಪಾನು ತನ್ನ ಕಾರ್ಯದಲ್ಲಿ ವಿಜಯವನ್ನು ಹೊಂದಿದಲ್ಲಿ ಅಮೇರಿಕಾ ಮತ್ತು ಬ್ರಿಟನ್ನುಗಳಿಗೆ ಪ್ರಾಮುಖ್ಯತೆಯು ತಗ್ಗಬಹುದಾದುದರಿಂದ ಈಗಲೇ ಜಪಾನಿಗೆ ಯಾವ್ವದಾದರೊಂದು ಇಕ್ಕಟ್ಟನ್ನುಂಟುಮಾಡುವುದು ಉಚಿತವಾಗಿರುತ್ತದೆ.

ಈಜಿಪ್ತದಲ್ಲಿ ಪಿರಾಮಿಡ್‌ಗಳು

೬ ಸಾವಿರ ವರ್ಷಗಳ ಹಿಂದಿನ ಅಚ್ಚಳಿಯದೆ ಇದ್ದಂಥ ಶವದ ನೋಟ

ಈಜಿಪ್ತದಲ್ಲಿಯ ಪಿರಮಿಡ್‌ಗಳಿಂದ ಈಜಿಪ್ತ ಪೂರ್ವ ನಿವಾಸಿಗಳ ಕೌಶಲ್ಯವು ಚನ್ನಾಗಿ ವ್ಯಕ್ತವಾಗುತ್ತದೆ. ಕೈರೋಪಟ್ಟಣವು ಈಜಿಪ್ತದ ರಾಜಧಾನಿಯಾಗಿದೆ. ಇಲ್ಲಿಯ ಪದಾರ್ಥ ಸಂಗ್ರಹಾಲಯವು ಬಹು ದೊಡ್ಡದಾಗಿರುತ್ತದೆ. ೬ ಸಾವಿರ ವರುಷಗಳ ಪೂರ್ವದ ಫರಾಒಹೂ ಎಂಬ ರಾಜನಪ್ರೇತವು ಇನ್ನೂ ಅಚ್ಚಳಿಯದಂತೆ ಇಲ್ಲಿ ಇಡಲ್ಪಟ್ಟಿದ್ದು ಈ ಪ್ರೇತದ ತಲೆಯ ಮೇಲಿನ ಕೂದಲುಗಳು, ಹಲ್ಲುಗಳು, ಬೆರಳುಗಳಲ್ಲಿಯ ಉಗುರುಗಳು ಇನ್ನೂ ಹಾಗೇ ಇರುತ್ತವೆ.

ಹಿಂದೂಸ್ತಾನದಲ್ಲಿಯ ತಾಜಮಹಾಲು, ಚೀನದಲ್ಲಿಯ ಗ್ರೇಟ್‌ವಾಲ್ ಮುಂತಾವುಗಳು ಜಗತ್ತಿನಲ್ಲಿಯೇ ಆಶ್ಚರ್ಯಕಾರಕ ವಸ್ತುಗಳಿದ್ದಂತೆ ಇಜಿಪ್ತದಲ್ಲಿಯ ಪಿರಮಿಡ್‌ಗಳು ಆಶ್ಚರ್ಯಕರವುಳ್ಳವುಗಳು ಪ್ರೇಕ್ಷಣೀಯವಾದಂಥವುಗಳು ಆಗಿರುತ್ತವೆ. ೬ ಸಾವಿರ ವರುಷಗಳ ಹಿಂದಿನ ಈ ಪಿರಾಮಿಡ್‌ಗಳನ್ನು ನೋಡಲಿಕ್ಕೆ ಪ್ರತಿವರ್ಷ ಸಾವಿರಾರು ಪ್ರವಾಸಿಕರು ಇಲ್ಲಿಗೆ ಬರುತ್ತಿರುತ್ತಾರೆ.

ಗ್ಯೆಝುದ ಎಂಬ ಪಿರಮಿಡ್‌ನ ಭವ್ಯವು ಎಲ್ಲಕ್ಕೂ ದೊಡ್ಡದು ಆಗಿದ್ದು ನೋಡುವವರನ್ನು ಆಶ್ಚರ್ಯಗೊಳಿಸುತ್ತದೆ. ಈ ಪಿರಾಮಿಡ್‌ದಿಂದ ೬ ಸಾವಿರ ವರುಷಗಳ ಪೂರ್ವದ ಇಜಿಪ್ತ ನಿವಾಸಿಗಳು ಎಂಥ ಪ್ರಚಂಡವಾದ ಶಕ್ತಿಯುಳ್ಳವರೆಂಬ ಕಲ್ಪನೆಯು ಸಹಜವಾಗಿ ಒರುತ್ತದೆ. ಯಾಕಂದರೆ ಒಂದರ ಮೇಲೊಂದು ಪರ್ವತ ಪ್ರಾಯವಾಗಿ ಕಟ್ಟಿಸಿಂಥ ಕಲ್ಲುಗಳ ಭವ್ಯವಾದ ರಾಶಿಯು ಇದಾಗಿರುತ್ತದೆ. ಈ ಪಿರಾಮಿಡ್‌ವನ್ನು ಶಿಕಪ್ಸ ಎಂಬ ಹೆಸರಿನ ರಾಜನು ತನ್ನ ಸ್ವತಂತ್ರ ವಿಶ್ರಾಂತಿಗೆ ಕಟ್ಟಿಸಿರತ್ತಾನಂತೆ. ಈಪಿರಾಮಿಡ್‌ವನ್ನು ೧ ಲಕ್ಷ ಜನರು ೨೦ ವರುಷಗಳವರೆಗೆ ಕೆಲಸಮಾಡಿ ಮುಗಿಸಿರುತ್ತಾರೆ. ಈ ಪಿರಾಮಿಡ್‌ಗಾಗಿ ಉಪಯೋಗಿಸಿದಂಥ ಕಲ್ಲುಗಳು ಮಧ್ಯಆಫ್ರಿಕಾ, ಅರಬಸ್ತಾನ, ಇರಾಣ ಮೊದಲಾದ ದೂರ ದೇಶಗಳಿಂದ ತರಲಾಗಿರುತ್ತವೆ ಯೆಂದು ಹೇಳಲ್ಪಡುತ್ತದೆ. ಯಂತ್ರಸಾಮಗ್ರಿ ಮೊದಲಾದ ಸೌಕರ್ಯಗಳಿಲ್ಲದಂಥ ಆ ಕಾಲದಲ್ಲಿ ಇಂಥ ಭವ್ಯ ಕಲಸವನ್ನು ಹೇಗೆ ಮಾಡಿರಬೇಕೆಂಬ ಆಶ್ಚರ್ಯವುಂಟಾಗಿ ಇಜಿಪ್ತ ನಿವಾಸಿಗಳ ಕೌಶಲ್ಯವು ಇಲ್ಲಿ ಚನ್ನಾಗಿ ವ್ಯಕ್ತವಾಗುತ್ತದೆ. ಈ ಪಿರಾಮಿಡ್‌ವು ೬ ಸಾವಿರ ವರುಷಗಳಾಗಿದ್ದರೂ ಒಂದೊನ್ನೆಯೊನ್ನೆ ಕಟ್ಟಿದಂತೆ ಇರುತ್ತದೆ. ಅದರ ಒಂದು ಕಲ್ಲು ಸಹ ಸರಿದಿರುವುದಿಲ್ಲ. ಇದನ್ನು ಸ್ವತಃ ಹಾಕಿನೋಡಬೇಕಾದರೆ ೧ ಮೈಲು ಪ್ರದಕ್ಷಿಣೆ ಮಾಡಬೇಕಾಗುತ್ತದೆ.

ಪಿರಾಮಿಡ್‌ವನ್ನು ನೋಡಬೇಕಾದರೆ ಅದನ್ನು ಆಳಿದವರು ಒಬ್ಬರೇ ಹೋಗಿ ನೋಡಿ ಒರಲಿಕ್ಕೆ ಶಕ್ಯವಿರುವುದಿಲ್ಲ. ಅದರ ಮಾಹಿತಿಯುಳ್ಳವರನ್ನು ಕರಕೊಂಡು ಹೋಗಬೇಕಾಗುತ್ತದೆ. ಇವರು ಸರಕಾರದಿಂದ ಲೈಸೆನ್ಸ ಹೊಂದಿದವರಿರುತ್ತಾರೆ. ಈ ಪಿರಾಮಿಡ್‌ದ ೩ ಅಂತಸ್ತುಗಳನ್ನತ್ತಿದಮೇಲೆ ಅದರ ಒಳಗೆ ಪ್ರವೇಶ ಮಾಡುವಂತೆ ಬಾಗಿಲು ಬರುವದು. ಈ ಬಾಗಿಲು ಮುಚ್ಚುವಂತೆ ಪುತ್ತು ತೆರಯಲಿಕ್ಕೆ ಬರುವಂತೆ ಇರುತ್ತದೆ ಈ ಬಾಗಿಲ ಹತ್ತರ ಇಜಿಪ್ತ ಸರಕಾರದಿಂದ ಒಬ್ಬ ಶಿಪಾಯಿ ಕುಳಿತಿರುತ್ತಾನೆ. ಈತನು ಒಳಗೆ ನೋಡಲಿಕ್ಕೆ ಬರುವವರ ಹೆಸರು ಸ್ಥಳ ಮೊದಲಾದ ಸಂಗತಿಗಳನ್ನು ಒರೆದುಕೊಳ್ಳುತ್ತಿರುತ್ತಾನೆ ಈ ಬಾಗಿಲಿನಿಂದ ಮುಂದೆ ಭೂಯ್ಯಾರವು ಅಂದರೆ ನೆಲಮನೆಯು ಇರುವದು. ಈ ನೆಲಮನೆಯಲ್ಲಿ ಕೆಳಕ್ಕೆ ಇಳಿಯಬೇಕಾಗುವದು. ಕತ್ತಲೆ ಇರುವದರಿಂದ ದೀಪಹಚ್ಚಿ ಮುಂದೆ ಹೋಗಬೇಕಾಗುತ್ತದೆ ಈ ಭೂಯ್ಯಾರದಿಂದ ಪುತ್ತಿ ಕೆಳಕ್ಕೆ ಸುಮಾರು ೧೦೦ ಫೂಟುಗಳ ವರೆಗೆ ಇಳಿಯಬೇಕಾಗುವದು ಇಲ್ಲಿಗೆ ಬಂದರೆ ಪಿರಾಮಿಡ್ ಶಿಖರದಿಂದ ಕೆಳಗೆ ೬೦೦ ಫೂಟುಗಳು ಅಂದರೆ ೧೦೦ ಅಳು ಕೆಳಗ ಬದುತಾಗುತ್ತದೆ. ಇಲ್ಲಿಗೆ ಒಂದರೆ ಇದೇ ಮುಖ್ಯಸ್ಥಾನವು ಇಲ್ಲಿಂದ ಪುನಃ ಏರಿ ಹೊರಗೆ ಬರಬೇಕಾಗುತ್ತದೆ. ಆದರೆ ಈ ಸ್ಥಾನದಲ್ಲಿ ಒಂದು ಕಲ್ಲಿನ ಹೊರತು ಬೇರೆ ಯಾವ ವಸ್ತುಗಳು ಈಗ ಇಲ್ಲಿ ಇರುವುದಿಲ್ಲ

ಲಂಡನ್ನಿನ ಬೀದಿಗಳಲ್ಲಿ ಅಡ್ಡಾಡುವವರು ತಮ್ಮ ಹೆಸರು ಮತ್ತು ಬಂಧು ಬಳಗದವರು ಹೆಸರುಗಳನ್ನು ಬರೆದ ಒಂದುಕಾಗದವನ್ನು ಕಿಸೆಯಲ್ಲಿಟ್ಟುಕೊಂಡು ಅಡ್ಡಾಡಬೇಕೆಂದು ಲಂಡನ್ನ ಗೃಹರಕ್ಷಣ ಖಾತೆಯವರು ಒಂದು ಆಜ್ಞೆ ಮಾಡಲಿಕ್ಕೆ ದಾಳಿಯ ಭೀತಿಯೇ ಕಾರಣವಾಗಿದೆ ಬಾಂಬುಗಳ ದಾಳಿಗಳಿಂದ ಯಾರಾದರೂ ಹಾದಿಯಲ್ಲಿ ಘಾಯಪಟ್ಟರೆ ಅಥವ ಸತ್ತರೆ ಅವರ ವಿಳಾಸದಿಂದ ಅವರ ಆಪ್ತರಿಗೆ ಅಥವ ಹಿತಸ್ಥರಿಗೆ ಅವರನ್ನು ಮುಟ್ಟಿಸಲಿಕ್ಕೆ ಅನುಕೂಲವಾಗಲೆಂದು ಇದನ್ನು ಮಾಡಿರುತ್ತಾರೆ.

ಸೋಮಾಲಲ್ಯಾಂಡ್ ಮತ್ತು ಲಿಬಿಯಾ ಸರಹದ್ದಿನಲ್ಲಿ ನಡೆದ ಯುದ್ಧದಲ್ಲಿ ಸೆರೆ ಹಿಡಿಯಲ್ಪಟ್ಟ 400 ಇಟಲಿ ಸೈನಿಕರನ್ನು ಕಳೆದ ತಾ|| 3 ರಲ್ಲಿ ಮುಂಬೈ ಪಟ್ಟಣಕ್ಕೆ ತಂದರು. ಈ ಯುದ್ಧ ಖೈದಿಗಳನ್ನು ಅಹಮ್ಮದ್ ನಗರಕ್ಕೆ ಕಳಿಸಲಾಗಿರುತ್ತದೆ.

ಆಧುನಿಕ ಯುದ್ಧ ಪದ್ಧತಿಯ ನಿರೀಕ್ಷಣೆ ಮಾಡಿ ಸೂಕ್ತ ಸೂಚನೆಗಳನ್ನು ಕೊಡುವದಕ್ಕಾಗಿ ಅಮೆರಿಕದ ಪ್ರೆಸಿಡೆಂಟ್ ರೂಸವೆಲ್ಟರು 3 ಜನ ಅಮೇರಿಕನ ತಜ್ಞರನ್ನು ಇಂಗ್ಲೆಂಡಿಗೆ ಕಳಿಸಿದ್ದು ಅವರು ಕಳೆದ ತಾ|| 5 ರಲ್ಲಿ ಲಂಡನ್ನಿನಲ್ಲಿ 6 ನೇ ಜಾರ್ಜ್ ಪ್ರಭುಗಳನ್ನು ಭೇಟಿಮಾಡಿದರು.

ಬ್ರಿಟನ್ನಿಗೆ ಅಮೇರಿಕೆಯ ಕಡೆಯಿಂದ ಪ್ರತಿ ತಿಂಗಳು 700 ಯುದ್ಧ ವಿಮಾನಗಳು ದೊರೆಯುವ ವ್ಯವಸ್ಥೆ ಮಾಡಲಾಗಿದೆಯೆಂದು ತಿಳಿಯುತ್ತದೆ. ಇದರಿಂದ 1942 ನೇ ಏಪ್ರಿಲ್‌ವರೆಗೆ ಬ್ರಿಟನ್ನು 14000 ಯುದ್ಧ ವಿಮಾನಗಳನ್ನು ಅಮೇರಿಕೆಯಿಂದ ಕೊಳ್ಳುವದೆಂದು ತಿಳಿಯುತ್ತದೆ.

ನಿಮ್ಮ ಚರ್ಮವೇ ನಿಮ್ಮ ಆರೋಗ್ಯಭಾಗ್ಯವು

——

ನಾವು ನಮ್ಮ ಕಣ್ಣುಗಳನ್ನಾಗಲೀ ಹಲ್ಲುಗಳನ್ನಾಗಲೀ ಡಾಕ್ಟರಿಂದ ಪರೀಕ್ಷೆ ಮಾಡಿಸಬೇಕಾದ ಪ್ರಮೇಯವು ಒದಗಿದಾಗ "ಈತನು ಚಿಕಿತ್ಸಾಶಾಸ್ತ್ರ ಪ್ರವೀಣನೋ ?" ಎಂಬ ವಿಷಯವನ್ನು ಪ್ರಥಮತಃ ಯೋಚಿಸುವೆವು. ಆ ಡಾಕ್ಟರನ ಮೋಸ ಭರವಸೆ ಇಡಬಹುದೇ ಎಂಬುವುದನ್ನು ಕೂಡ ಅರಿಯು ಜಾಗರೂಕರಾಗುತ್ತೇವೆ.

ನಿಜವಾಗಿ, ಸರಿಯಾದ ಶಾಸ್ತ್ರಜ್ಞಾನವಿಲ್ಲದ ಅಥವಾ ಅನುಭವವಿಲ್ಲದ ಡಾಕ್ಟರುಗಳ ವಶಕ್ಕೆ ನಮ್ಮ ಕಣ್ಣುಗಳನ್ನಾಗಲೀ ಹಲ್ಲುಗಳನ್ನಾಗಲೀ ಚಿಕಿತ್ಸೆಗಾಗಿ ಒಪ್ಪಿಸತಕ್ಕುದಲ್ಲ.

ಇನ್ನು ನಿಮ್ಮ ಚರ್ಮದ ವಿಷಯವೋ ?

ನೀವು ದೇಹನೈರ್ಮಲ್ಯಕ್ಕಾಗಿ ಉಪಯೋಗಿಸುವ ಸಾಬೂನಿನ ವಿಷಯವೇನು ? ಅದು ಪೆರಿಕೆಯಿಲ್ಲದ ಕಚ್ಚಾ ಪದಾರ್ಥಗಳಿಂದ ಆರೋಗ್ಯ ವಿಧಾನದಿಂದ ತಯಾರಿಸಲ್ಪಟ್ಟಿದೆಯೇ ? ಎಂಬ ವಿಷಯವನ್ನು ಗಮನದಲ್ಲಿಟ್ಟಿರುವಿರಾ ? ಅಥವಾ ಬೇರೊಬ್ಬರು ಉಪಯೋಗಿಸುತ್ತಿರುವರೆಂದು ಯಾವದೋ ಒಂದು ತರಹದ ಸಾಬೂನನ್ನು ಉಪಯೋಗಿಸುತ್ತಿರುವಿರಾ ? ಅಥವಾ ಜಾಹಿರಾತುಗಳ ಮನಮೋಹಕರವಾದ ಮಾತುಗಳಿಗೆ ಮರುಳಾಗಿ ಹೋಗಿರುವಿರಾ ?

ನಿಮ್ಮ ಚರ್ಮದ ರಕ್ಷಣೆಯು ನೀವು ಉಪಯೋಗಿಸುವ ಸಾಬೂನನ್ನು ಅವಲಂಬಿಸುತ್ತದೆ. ದೇಹಾರೋಗ್ಯವಾದರೋ ಚರ್ಮದ ನೈರ್ಮಲ್ಯವನ್ನವಲಂಬಿಸಿರುತ್ತದೆ. ವ್ಯಾಧಿಗಳನ್ನು ಬಗೆಬಗೆಯ ತೈಲಗಳ ಮೂಲಕ ಗುಣಪಡಿಸುವ ಪದ್ಧತಿಯು "ಅಷ್ಟಾಂಗಹೃದಯ" ವೆಂಬ ಪ್ರಾಚೀನ ವೈದ್ಯಗ್ರಂಥದಲ್ಲಿ ತಿಳಿಸಿರುತ್ತದೆ. ತೈಲ ಮತ್ತು ಪನ್ನಾರೆ ಸಾಮಾನುಗಳ ಮುಖೇನ ಕ್ರಿಮಿಗಳಕೋಟೆಯನ್ನು ಎದುರಿಸಲಾಗುತ್ತಿತ್ತು.

ಮೈಸೂರು ಗಂಧದ ಸಾಬೂನಿನ ವಿಷಯದಲ್ಲಿ ಮೈಸೂರು ಸರ್ಕಾರವು ಭರವಸೆಯನ್ನು ಕೊಡುತ್ತದೆ. ಇದರ ತಯಾರಿಯಲ್ಲಿ ಉಪಯೋಗಿಸುವ ಪ್ರತಿ ಪದಾರ್ಥವೂ ಚೆನ್ನಾಗಿ ಪರಿಶೋಧಿಸಲ್ಪಡುತ್ತೆ.

ಈ ಕಾರ್ಖಾನೆಯಲ್ಲಿ ತಯಾರಿಸಲ್ಪಡುವ ಪದಾರ್ಥಗಳಲ್ಲಿ ಯಾವ ಬಗೆಯ ಕಲ್ಮಷ ಪದಾರ್ಥವಾಗಲೀ ಹಾನಿಕರವಾದ ಪದಾರ್ಥವಾಗಲೀ ಸೇರಿರುವದಿಲ್ಲವೆಂಬ ಭರವಸೆಯು ಮೈಸೂರು ಸ್ಯಾಂಡಲ್ ಸೋಪಿನ ವಿಷಯದಲ್ಲಿಯೂ ಅನ್ವಯಿಸುತ್ತದೆ.

ಈ ಭರವಸೆಯು ಮೈಸೂರು ಸ್ಯಾಂಡಲ್ ಸೋಪಿಗೆ ಮಾತ್ರವೇ ಅಲ್ಲ. ಮೈಸೂರು ಸರ್ಕಾರದ ಸಾಬೂನು ಕಾರ್ಖಾನೆಯಲ್ಲಿ ತಯಾರಾಗುವ ಎಲ್ಲಾ ಬಗೆಯ ಸಾಬೂನುಗಳಿಗೂ ಈ ಭರವಸೆಯು ಅನ್ವಯಿಸುತ್ತದೆ.— ಮೈಸೂರು ಜಾಸ್ಮಿ ಸೋಪು, ಮೈಸೂರು ಗುಲಾಬ್ ಸೋಪು, ಮೈಸೂರು ಲೆವೆಂಡರ್ ಸೋಪು, ಮೈಸೂರು ಬಾತ್ ಟ್ಯಾಬ್ಲೆಟ್, ಮೈಸೂರು ಪೊಂಗಂಬೇವು ಸೋಪು, ಮೈಸೂರು ಟರ್ಕಿಷ್ ಬಾತ್ ಸೋಪು, ಮೈಸೂರು ವಾಷಿಂಗ್ ಸೋಪು, ಮೈಸೂರು ಫೇರಿ ಫ್ಲೇಕ್ಸ್, ಮೈಸೂರು ಕಾರ್ಬಾಲಿಕ್ ಸೋಪು, ಮೈಸೂರು ಲಿಕ್ವಿಡ್ ಸೋಪು, ಟಿಕ್ಟೈಲ್ ಸೋಪು, ಇಕ್ಸೆಕ್ಟಿಸೈಡಲ್ ಸೋಪು ಸಾಫ್ಟ್ ಸೋಪು. ಈ ಎಲ್ಲಾ ಸೋಪುಗಳೂ ಪರಿಶುದ್ಧ ಹಾಗೂ ಶ್ರೇಷ್ಠವಾದುವು.

ಇಷ್ಟು ಮಾತ್ರವೇ ಅಲ್ಲ. ಆಧುನಿಕ ಮಹನೀಯರಿಗೂ ಮಹಿಳೆಯರಿಗೂ ಅನುದಿನವೂ ಅವಶ್ಯಕಗಳಾಗಿರುವ ಈ ಕೆಳಗೆ ವಿವರಿಸಿರುವ ಪದಾರ್ಥಗಳ ವಿಷಯದಲ್ಲಿಯೂ ಮೈಸೂರು ಸರ್ಕಾರವು ಭರವಸೆಯನ್ನು ಕೊಡುತ್ತದೆ.— ಮೈಸೂರು ಪೆರಲೈಟ್ ವ್ಯಾನಿಷಿಂಗ್ ಕ್ರೀಂ, ಮೈಸೂರು ಬಿಲಾಸಿನಿ ಬ್ರಿಲಿಯಂಟೈನ್, ಮೈಸೂರು ಫೇರಿ ಪೋಮೇಡ್, ಮೈಸೂರು ಕ್ವಾಲಿಟಿ ಷೇವಿಂಗ್ ಸ್ಟಿಕ್, ಮೈಸೂರು ಡೆಂಟಲ್ ಕ್ರೀಂ ಮೈಸೂರು ಬ್ಲೂಡೆಂಟ್, ಮೈಸೂರು ಬೂಟ್ ಪಾಲಿಷ್ (ಬ್ರೌನ್, ಬ್ಲ್ಯಾಕ್, ಡಾರ್ಕ್‌ಟ್ಯಾನ್) ಮೈಸೂರು ಕ್ವಿಕ್ ಫಿಕ್ಸ್, ಐಡೋಕೂರ್.

ನಾಯಿಗಳ ಮೇಲೆ ಕರ.

ಮುಂಬೈಪಟ್ಟಣದಲ್ಲಿ ಓಣಿಯಲ್ಲಿ ಅಡ್ಡಾಡುತ್ತಿರುವ ನಾಯಿಗಳನ್ನು ಹಿಡಿಯುವುದನ್ನು ಮುಂಬೈ ಕಾರ್ಪೋರೇಶನ್ನಿನವರು ೧೯೧೫ ನೆ ವರುಷದಿಂದ ಪ್ರತಿವರುಷ ಮಾಡುತ್ತಿದ್ದು ಈ ಬಗ್ಗೆ ಪ್ರತಿವರ್ಷ ೭ ಸಾವಿರ ರೂಪಾಯಿಗಳ ಖರ್ಚು ಬರುತ್ತಿರುತ್ತದೆ. ಇಷ್ಟಾದರೂ ಮುಂಬೈಯಲ್ಲಿ ನಾಯಿ ಕಡುತಗಳು ಹೇರಳವಾಗಿ ಸಂಭವಿಸುತ್ತಲಿವೆಯಂತೆ ಹಾಫಕಿನ ಇನ್‌ಸ್ಟಿಟ್ಯೂಟಿನ ಹೋದ ೪ ವರ್ಷಗಳಿಂದ ಸರಾಸರಿ ಪ್ರತಿವರ್ಷ ೨ ಸಾವಿರ ಜನರಿಗೆ ನಾಯಿಗಳ ವಿಷಪ್ರವೇಶದ ಸಂಬಧದಲ್ಲಿ ಔಷಧೋಪಚಾರ ಮಾಡುತ್ತ ಒಂದಿರುತ್ತದೆ ಮತ್ತು ನಾಯಿಕಡತದ ಉಪದ್ರವವು ಇತ್ತೀಚೆಗೆ ಹೆಚ್ಚುತ್ತಿರುತ್ತದೆ. ಇದರಿಂದ ಖಾಸಗೀ ಸಾಕು ನಾಯಿಗಳ ಮೇಲೂ ಸಹ ಕಾರ್ಪೋರೇಶನ್ನಿನವರು ನಿರ್ಭಂದ ಇಡುವದನ್ನು ಯೋಚಿಸಿದ್ದು ಇದರಿಂದ ಪ್ರತಿನಾಯಿಗೆ ವರ್ಷಕ್ಕೆ ೫ ರೂ ಫೀ ಕೊಟ್ಟು ನಾಯಿ ಸಾಕುವಬಗ್ಗೆ ಅಪ್ಪಣೆ ತೆಗೆದುಕೊಳ್ಳಬೇಕಾಗುವದು. ಈತರದ ಕಾಯಿದೆಯು ಈ ಮೊದಲೇ ಮದ್ರಾಸು ಮತ್ತು ಕಲ್ಕತ್ತಾ ಪಟ್ಟಣಗಳಲ್ಲಿ ಇರುತ್ತದೆ. ಮುಂಬೈ ಕಾರ್ಪೋರೆಶನ್ನಿನವರು ಈ ಬಗ್ಗೆ ಜನರ ಅಭಿವ್ಯಾಯಗಳನ್ನು ಕೇಳಿರುತ್ತಾರೆ.

ಲೇಖಕರಿಗೆ ಸೂಚನೆ

ಚೆನ್ನಾಗಿರುವ ಕಥೆ, ನಾಟಕ, ತಾತ್ವಿಕ ಲಿಕ ಮತ್ತು ದೇಶಹಿತದಾಯಕವಾದ ಲೇಖನಗಳು, ವಿನೋದ ವಿಚಾರ, ಮುಂತಾದವುಗಳನ್ನು ಕಳುಹಿಸಿದರೆ ಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ.

VAIDYARATNAM

P. S. Varier's

Arya Vaidya Sala

Kottakkal

Branches — Calicut & Palghat

The pioneer ayurvedic institution in Southern India with over 35 years reputation. The ever increasing popularity of this firm all over India, Burma Ceylon, Malaya and other colonies alone stands for itsunequalled reliability. All sorts of ayurvedic preparations prepared under scientific methods are always kept here in stock for sale Dhara, Navarakkizhi, Pizhichil and other special treatments of Malabar are conducted under Vaidyaratnam's own supervision. Treatment through correspondance a speciality. Vaidya ratnam vsits his Calicut branch on almost every 1 st and 3 rd Sundays and Palghat Branch on 2 nd and 4th Sundays.

CHYAVANAPRAS

From the time of ancient sages this medicine is reknownedfor its unequalled efficacy in retaining youthfulness. It is so termed because Sage Chyavan was able to regain his youth at nineties with its use. It is a great tonic for boys of weak health and it prevents old age in young men. Besides it is very effective in all sorts of Respiratory complaints, Heart diseases, Rheumatism, and many other diseases.. Direction — ½ to 2 tolas twice daily after food. Price per pound Rs 4.

For further particulars and free catologues pleaseapply to—

The Manager, Arya Vaidyasala,
KOTTAKAL (S.Malabar)

The Satyavadi Limited.

(Incorporated in Mysore State)

MYSORE

A few shares of Rs. 5 are available

ಪ್ರಿಂಟಿಂಗ್ ವಿಚಾರದಲ್ಲಿ

ನಮ್ಮಲ್ಲಿ ಅಧಿಕ ಸೌಲಭ್ಯಗಳಿವೆ.

ಸತ್ಯವಾದಿ ಲಿಮಿಟೆಡ್,
ಚಾಮರಾಜಪುರಂ, ಮೈಸೂರು.

ಈ ವಾರದ ಭವಿಷ್ಯ

ಜ್ಯೋತಿಷ್ಕರ್ — ಕೃಷ್ಣಾಪುರದ
ಶೇಟ್ಟೂರು ವೆಂಕಟನರಸಿಂಹಾಚಾರ್
ಬೃಹಸ್ಪತಿ ಜ್ಯೋತಿಷಾಲಯ,
ಹಳೇ ಪೋಸ್ಟಾಫೀಸು ರೋಡು, ಮೈಸೂರು

ಮೇಷ

ತಾ|| 18, 22, 23 ಕಾರ್ಯವಿಘ್ನ ಗೃಹದಲ್ಲಿ ಅನಾನುಕೂಲ ಧನಧಾನ್ಯವ್ಯಯ ಸರ್ಕಾರಿಕಾರ್ಯ ಮುಂದುವರಿಸುವಿಕೆ ಜನರಲ್ಲಿ ನಿಷ್ಠೂರ ಚಂಚಲತೆ ಉಳಿಕೆ ದಿವಸಗಳಲ್ಲಿ ದೇವತಾಗುರುಭಕ್ತಿ ರಾಜಕೀಜನರಿಂದ ಕಾರ್ಯಾನುಕೂಲ ಗೃಹಾಭಿವೃದ್ಧಿ ಶುಭವಾರ್ತಾಧಿಕ ಸತ್ಕಥಾಶ್ರವಣ ಆರೋಗ್ಯ ಉತ್ಸಾಹ ಕೀರ್ತಿ.

ವೃಷಭ

ತಾ|| 18, 22, 23 ಜಯಕಾಲ ಗೃಹ ಕೃತ್ಯಾನುಕೂಲತೆ ಬಂಧುಭಾಗ್ಯ ಶತ್ರುಂಜಯ ರಾಜಕೀಕಾರ್ಯದಲ್ಲಿ ಸುಖ ಧನಧಾನ್ಯಾಭಿವೃದ್ಧಿಯು ಲಾಭಕಾರ್ಯ ಮುಂದುವರಿಸುವಿಕೆ ಮಿತ್ರರಲ್ಲಿ ದ್ವೇಷ ವಾಹನಾದಿ ನಷ್ಟ ಧನಧಾನ್ಯ ವ್ಯಯ ಚಂಚಲತೆ ಅನಾರೋಗ್ಯ ಯೆಳ್ಳು ಬೆಲ್ಲ ದಾನ ಕೊಡಿ ಕ್ಷೇಮ.

ಮಿಥುನ

ಈ ವಾರ ನಿಮಗೆ ಸುಖಾಧಿಕ ಭೂಸ್ಥಿತಿ ವೃದ್ಧಿ ಲಾಭ ರಾಜಕೀಜನರಿಂದ ಲಾಭ ವಿದ್ಯಾಕೀರ್ತಿ ಬಂಧುಭಾಗ್ಯ ಮಂಗಳಕರವಾದ ಉತ್ಸವವೂ ಗೃಹಕೃತ್ಯಾನುಕೂಲತೆ ಶತ್ರುಂಜಯ ಉತ್ಸಾಹ ಆರೋಗ್ಯ ಶುಭ ವಾರ್ತಾಧಿಕ,

ಕರ್ಕಾಟಕ

ನಿಮಗೆ ಸ್ವಕೀಯ ಜನರಿಂದ ಸಂತೋಷ ಆಭರಣಾದಿ ಸುಖ ಕೀರ್ತಿ ಲಾಭ ಧನಧಾನ್ಯವೃದ್ಧಿ ಸತ್ಕಥಾಶ್ರವಣ ಪ್ರಯತ್ನಕಾರ್ಯ ಕೈಗೂಡುವಿಕೆ. ಸರ್ಕಾರಿ ಕಾರ್ಯ ಸುಖ ಮಹಾತ್ಮರ ಸೇವಾಫಲ ಸ್ವಪರಜನ ಸಹಾಯ ಗೃಹಕೃತ್ಯಾನುಕೂಲತೆ ಬಂಧುಭಾಗ್ಯ ಸಂಘಕಾರ್ಯದಲ್ಲಿ ಕೀರ್ತಿ ತಾ|| 18 ಅನಾರೋಗ್ಯ ವ್ಯಯಾಧಿಕ ಸಹಸ್ರನಾಮ ಪಾರಾಯಣಮಾಡಿ.

ಸಿಂಹ

ತಾ|| 18, 19, 20 ಧನಧಾನ್ಯವ್ಯಯ ಚಂಚಲತೆ ಗೃಹಕೃತ್ಯದಲ್ಲಿ ತೊಂದರೆ ರಾಜಕೀಜನರಲ್ಲಿ ವಿರೋಧ ಕಲಹ ಗೋಪೂಜೆಯಿಂದ ಸುಖ ಉಳುಕೆ ದಿವಸಗಳಲ್ಲಿ ಪ್ರಯತ್ನಕಾರ್ಯಾನುಕೂಲತೆ ಮಿತ್ರಬಂಧುವೃದ್ಧಿ ಪುಣ ತೀರ್ಥಸ್ನಾನಫಲ, ರಾಜಕೀ ಜನರಿಂದ ಸೌಖ್ಯ ದೇಪತಾಗುರುಭಕ್ತಿ ಶುಭವಾರ್ತೆ ಲಾಭಕಾರ್ಯ ಮಹಾತ್ಮರ ಸೇವಾಫಲ ಪಶುವೃದ್ಧಿ.

ಕನ್ಯಾ

ಈ ವಾರ ನಿಮಗೆ ಸಂಚಾರಾಧಿಕದಿಂದ ಅನಾರೋಗ್ಯ ನೀಚಸ್ತ್ರೀಕಲಹ ಧನವ್ಯಯ ಅಧಿಕಾರಿಯಲ್ಲಿ ವಿರೋಧ ಆಶ್ಚರ್ಯವಾದ ವ್ಯಾಜ್ಯ ಚಂಚಲತೆ, ಸಹಜರೊಡನೆ ಮನಸ್ತಾಪ ಭೃತ್ಯನಷ್ಟ ಆದಿತ್ಯಹೃದಯ ಪಾರಾಯಣ ಮಾಡಿ ಗೋಧಿ ತೊಗರಿಬೇಳೆ ದಾನ ಕೊಡಿ ಶುಭಫಲ ತಾ|| 18, 24 ಉತ್ಸಾಹ ಕೀರ್ತಿ ಲಾಭಕಾರ್ಯ.

ತುಲಾ

ತಾ|| 18, 19, 20, 21 ವಿದ್ಯಾಕೀರ್ತಿ ರಾಜಕೀಜನರಿಂದ ಮರ್ಯಾದೆ ವಾಹನಾಭಿವೃದ್ಧಿ ಭೂವ್ಯವಸಾಯಾದಿ ಫಲವೃದ್ಧಿ ಸ್ತ್ರೀ ಮೂಲಕ ಲಾಭ ಪುಣ್ಯತೀರ್ಥಸ್ನಾನಫಲ ದೇವತಾಗುರು ಸಂದರ್ಶನ ಪಶ್ವಾದಿ ಭಾಗ್ಯ ಗೃಹಾಭಿವೃದ್ಧಿ ಉಳಿಕೆ ದಿನಗಳಲ್ಲಿ ಚಂಚಲತೆ ಕಲಹದಿಂದ ಧನವ್ಯಯ ಪ್ರಯತ್ನಕಾರ್ಯ ಭಂಗ ಅನಾರೋಗ್ಯ ಪೂಜ್ಯರಲ್ಲಿ ಮನಸ್ತಾಪ ಸಹಸ್ರನಾಮ ಅರ್ಚನೆಮಾಡಿ ಕೃಷ್ಣಪೂಜೆಯಿಂದ ಕ್ಷೇಮ.

ವೃಶ್ಚಿಕ

ಈ ವಾರ ನಿಮಗೆ ಜಯ ಸರ್ಕಾರಿ ಕಾರ್ಯದಿಂದ ಅನುಕೂಲತೆ ಶತ್ರುಂಜಯ ಬಂಧುಭಾಗ್ಯ ಪ್ರಯತ್ನಕಾರ್ಯಲಾಭ ಧಾನ್ಯವೃದ್ಧಿ, ಗೃಹಕೃತ್ಯಾನುಕೂಲತೆ ಸಮೂಹದಲ್ಲಿ ವಾಕುಚಾತುರ್ಯ ವಿದ್ಯಾಕೀರ್ತಿ ಶುಭವಾರ್ತಾಧಿಕ ದೇವತಾಗುರು ಸೇವಾಫಲ ತಾ|| 24 ವ್ಯಯಾಧಿಕ ಕಾರ್ಯದಲ್ಲಿ ಉತ್ಸಾಹ ಕಡಮೆ ಹುಡುಗರಿಗೆ ಹಾಲು ತೆಗೆದುಕೊಡಿ ಶುಭ.

ಧನು

ತಾ|| 18, 19, 20 ಅನಾರೋಗ್ಯ ಆಪ್ತರೊಡನೆ ವಿರೋಧತ್ವ ಶತ್ರುಚೋರಬಾಧ ಗೃಹಕೃತ್ಯದಲ್ಲಿ ಅನಾರೋಗ್ಯ ಚಂಚಲತೆ ಲಕ್ಷ್ಮೀಪೂಜೆ ಮಾಡಿಸಿ ಬೆಲ್ಲ ದಾನ ಕೊಡಿ ಶುಭಫಲ ಉಳಿಕೆ ದಿವಸಗಳಲ್ಲಿ ಆರೋಗ್ಯ ಮಂಗಳಕಾರ್ಯ ವಾಹನಾದಿ ಸುಖ ಆಪ್ತಬಂಧುಗಳ ದರ್ಶನ ರಾಜಕೀ ಜನರಿಂದ ಕ್ಷೇಮ ಶತ್ರುಂಜಯ ಸಮಾನಜನಸೌಖ್ಯ ಸಂಗಕಾರ್ಯದಲ್ಲಿ ಗಣ್ಯತೆ ಉತ್ಸಾಹ ಕೀರ್ತಿ.

ಮಕರ

ಈ ವಾರ ನಿಮಗೆ ಶೂದ್ರಪ್ರಭು ವಿಶ್ವಾಶಾಧಿಕ ಪ್ರಯತ್ನಕಾರ್ಯಸಿದ್ಧಿ ಶತ್ರುಂಜಯ ಧನಧಾನ್ಯವೃದ್ಧಿ ಲಾಭಕಾರ್ಯ ಗೃಹಕೃತ್ಯಾನುಕೂಲತೆ ವಿದ್ಯಾವಾದದಲ್ಲಿ ವಿಜಯ ಸ್ವಪರಜನ ಸಹಾಯ ಮಂಗಳಕಾರ್ಯ.

ಕುಂಭ

ತಾ|| 18, 22, 23, 24 ಪ್ರಯತ್ನಕಾರ್ಯದಲ್ಲಿ ಅನಾನುಕೂಲತೆ ಸ್ವಕೀಯರೊಡನೆ ಮನಸ್ತಾಪ ಬಂಧುವಿಗೆ ತೊಂದರೆ ಅನಾರೋಗ್ಯ ಶತ್ರುವೃದ್ಧಿ ಗೃಹಕೃತ್ಯದಲ್ಲಿ ಮನಸ್ತಾಪ ಸೂರ್ಯನಮಸ್ಕಾರ ಮಾಡಿ, ಅಶ್ವತ್ಥಪ್ರದಕ್ಷಿಣೆ ಮಾಡಿ ವಾನಂಗಳಿಗೆ ತಿಂಡಿಕೊಡಿ. ತುಭಫಲ. ಉಳಿಕೆದಿವಸಗಳಲ್ಲಿ ಕೀರ್ತಿ ಉತ್ಸಾಹ, ಸತ್ಕಥಾಶ್ರವಣ ಸ್ತ್ರೀಯರಿಂದ ಲಾಭ, ಪೂಜ್ಯರನ್ನು ಸತ್ಕರಿಸುವಿಕೆ ಶುಭಕಾರ್ಯ, ರಾಜಕೀ ಜನರಲ್ಲಿ ಮರ್ಯಾದೆ ಆರೋಗ್ಯ.

ವಿನೋದಲಹರಿ

ಪ್ರಯಾಣಿಕ—ಸ್ವಾಮಿ 10 ಘಂಟೆಯ ರೈಲು ಯಾವಾಗ ಹೊರಡುತ್ತೆ.

ದಾರಿಹೋಕ—9 ಘಂಟೆ 60 ನಿಮಿಷಕ್ಕೆ ಸರಿಯಾಗಿ.

ಪೋಲಿಸ್—ಸೈಕಲ್ ಸವಾರನನ್ನು ಕುರಿತು ಯಾಕ್ರಿ ಲೈಟು ಹಾಕಿಲ್ಲ?

ಸೈಕಲ್ಲಿನವನು—ಸ್ವಾಮಿ ಲೈಟು ಯಾರೋ ಕದ್ದುಬಿಟ್ಟಿದ್ದಾರೆ ಅದಕ್ಕೋಸ್ಕರ ಅವರನ್ನು ಪತ್ತೆಮಾಡಬೇಕು ಅಂತ ಲೈಟು ಇಲ್ಲದೆ ತಿರುಗುತ್ತೇನೆ.

ಒಬ್ಬ—ನಿದ್ರೆಯಲ್ಲಿ ತುಳಿಯಬೇಡ ಹುಷಾರಾಗಿರು.

ಇನ್ನೊಬ್ಬ—ತುಳಿದರು ನೀನು ತುಳಿಸಿಕೋಬೇಡ ಜಾಗ್ರತೆ.

ಹರಟೆಮಲ್ಲ—ಚಿನ್ನ ವಿಶೇಷವಾಗಿ ಎಲ್ಲಿ ದೊರೆಯುತ್ತೆ.

ಕಿಲಾಡಿಕಿಟ್ಟ—ಹೆಂಗಸರ ಮೈ ಮೇಲೆ ಸಾಧಾರಣವಾಗಿ ದೊರೆಯುತ್ತೆ.

ಗುರು—ಶಿಷ್ಯನನ್ನು ಕುರಿತು ಲೋ, ದಾನಗಳಲ್ಲಿ ದೊಡ್ಡ ದಾನ ಯಾವುದೋ?

ತಲೆಹರಟೆ ಶಿಷ್ಯ—ಮೈದಾನ ಸಾರ್.

ಪೋಲಿಸಿನವನೊಬ್ಬ—ಸೈಕಲಿನಲ್ಲಿ ಲೈಟು ಇಲ್ಲದೆ ಬರುವವನೊಬ್ಬನನ್ನು ಕುರಿತು ಏನ್ರೀ ಎಂಟು ಘಂಟೆಯಾದರೂ ಲೈಟು ಇಲ್ಲದೆ ತಿರುಗುತ್ತೀರಿ? ಎಲ್ರಿ ನಿಮ್ಮ ಅಡ್ರೆಸ್ಸು ಕೊಡಿ.

ಸೈಕಲ್ ಸವಾರ—(ಸ್ವಲ್ಪ ಯೋಚಿಸಿ) ಕ್ಷಮಿಸಿ ನನ್ನ ಲೈಟು ಯಾರೋ ಕದ್ದು ಬಿಟ್ಟಿದ್ದಾರೆ ಕಂಪ್ಲೇಟು ಕೊಡೋಣವೆಂದು ನೀವು ಇವ್ವಲ್ಲಿಗೇ ಬಂದೆ.

ಕೆ. ತಿಮ್ಮಯ್ಯ,
ಉ|| ಆ|| ಭವನಂ ಮೈಸೂರು.

ಮೀನ

ತಾ|| 18, 22, 23, 24 ಕಾರ್ಯಾನುಕೂಲತೆ ರಾಜಕೀಯರ ಸನ್ಮಾನ, ದೇವತಾದರ್ಶನ. ಗೃಹದಲ್ಲಿ ಮಂಗಳಕಾರ್ಯ ಮಂತ್ರಸಿದ್ಧಿ, ಸುಯೋಗ ಮಿಕ್ಕದಿವಸಗಳಲ್ಲಿ ಸಂಚಾರದಿಂದ ಅಕಾಲ ಭೋಜನ ಸ್ತ್ರೀಮೂಲ್ಕಧನವ್ಯಯ ಸೀಚಾಶ್ರಯ ಬಂಧುವಿಗೆ ತೊಂದರೆ ಸಾಲಗಾರರ ತಗಾದೆ ಲಕ್ಷ್ಮೀಪೂಜೆಮಾಡಿಸಿ ಸುವಾಸಿನಿಯರಿಗೆ ಪುಷ್ಪ ತೆಗೆದುಕೊಡಿ ಶುಭಫಲ

Founded 1917

SATYAVADI

ದಸರಾ ಮಹೋತ್ಸವದ ಬಿಸಿಬಿಸಿ ಪ್ರೋಗ್ರಾಂ

ಇದೇ ಸೆಪ್ಟೆಂಬರ್ ೨೮ ನೇ ತಾರೀಖಿನಿಂದ ಪ್ರಾರಂಭ

ನ್ಯೂ ಕೃಷ್ಣಾ ಟಾಕೀಸು

ಹತೀಂತಾಯ್–ಕೀ–ಬೇಟಿ

ಎಂಬ ಉರುದು ವಾಕ್ಚಿತ್ರ

ಈ ಚಿತ್ರನನ್ನು ಮಾತ್ರ ನೋಡಲು

ತಪ್ಪಬೇಡಿ

Specially arranged for Dasara Festival

New Krishna Talkies

Commencing from 28-9-40

HATIMTAI-KI-BETTI

in Urdu

---

* ರಾಜಕೀಯ ಪರಿಸ್ಥಿತಿಗಳು *
* ಸಾಮಾಜಿಕ ಸುಧಾರಣೆಗಳು *
* ದೇಶವಿದೇಶ ವರ್ತಮಾನಗಳು *
* ಚಿತ್ರವಿಚಿತ್ರ ವಾರ್ತಾವಳಿಗಳು *

ಇವೆಲ್ಲ ವಿಷಯಗಳ ಕುರಿತು ತಿಳಿಯಬೇಕಾದರೆ,
ಇಡೀ ಕರ್ನಾಟಕದ ಹೊರ–ಒಳ ಭಾಗಗಳಲ್ಲಿ
ಎಲ್ಲಾ ತರದ ಜನರಿಂದಲೂ ಆದರಿಸಲ್ಪಡುತ್ತಿರುವ

ನವಸಂದೇಶ

ಇಂದೇ ಚಂದಾದಾರರಾಗಿರಿ.

ಅಂಚೇವೆಚ್ಚ ಸೇರಿ ರೂ. ೩–೮–೦

ಹೆಚ್ಚಿನ ವಿಷಯಗಳಿಗೆ ಮ್ಯಾನೇಜರಿಗೆ ಬರೆಯಿರಿ

ನವಸಂದೇಶ ಕಾರ್ಯಾಲಯ, ಬಳ್ಳಾರಿ

When you desire to buy or sell

Houses & Sites
Govt. Loan Bonds
Shares of Companies
apply to
The Satyavadi Ltd., Mysore.

ಮನೆ ಮತ್ತು ಸೈಟುಗಳನ್ನೂ
ಸರ್ಕಾರಿ ಸಾಲದಪತ್ರ ಮತ್ತು
ಕಂಪೆನಿ ಷೇರುಗಳನ್ನೂ
ಕೊಂಡುಕೊಳ್ಳುತ್ತೇವೆ ಮತ್ತು ಮಾರುತ್ತೇವೆ.
ಬೇಕಾದವರು ತಿಳಿಸಬಹುದು.

ಮುಂದಿನ ವಾರದ ಸತ್ಯವಾದಿ ಪತ್ರಿಕೆಯನ್ನು
ಓದಲು ತಪ್ಪಿಸಿರಿ

Edited, Printed & published by
M .S. Krishna Rao, at the Satyavadi
Press, Chamaraja Agrahar Mysore